# 11

# ದೇವರು ನಮ್ಮ ಆತ್ಮಿಕ ತಂದೆಯಂತೆ

ದೇವರನ್ನು ನಾವು ನಿತ್ಯಾನಾದ ತಂದೆಯಂತೆ (ದೈವತ್ವದಲ್ಲಿ), ವಿಶ್ವದ ತಂದೆಯಂತೆ (ಸೃಷ್ಟಿಯಲ್ಲಿ) ಮತ್ತು *ಅಯ್ಕೆಮಾಡುವ* ತಂದೆಯಂತೆ (ಆತನ ವಾಗ್ದಾನದಲ್ಲಿ/ ಒಡಂಬಡಿಕೆಯಲ್ಲಿ) ಹೇಗೆ ನೋಡಬಹುದು ಎಂಬುದನ್ನು ಪರಿಶೀಲಿಸಿದ್ದೇವೆ. ಈಗ ನಾವು *ಆತ್ಮಿಕ* ತಂದೆಯಂತೆ ದೇವರ ಕಾರ್ಯದ ಅಧ್ಯಯನ ಪ್ರಾರಂಭಿಸೋಣ.

### ಬೇರ್ಪಡಿಸುವಿಕೆಯ ಸಮಸ್ಯೆ

ದೇವರೊಂದಿಗೆ ಇರುವ ಸಂಬಂಧವನ್ನು ಪಾಪವು ಕೆಡಿಸುವವರೆಗೆ, ವಿಶ್ವದ ತಂದೆಯಂತೆ ದೇವರು ಮನುಷ್ಯನೊಂದಿಗೆ ಸಂಪೂರ್ಣ ಅನ್ಯೋನ್ಯತೆಯಲ್ಲಿ ಇದ್ದನು. ದೇವರು ಆದಾಮ, ಹವ್ವರನ್ನು ತೋಟದಿಂದ ಹೊರಗೆ ಹಾಗೂ ಜೀವವೃಕ್ಷದಿಂದ ದೂರಕಳುಹಿಸಿದಾಗ ದೇವರು ಏಕ ಪಕ್ಷವಾಗಿ ವರ್ತಿಸಲಿಲ್ಲ, ಬೇರ್ಪಡಿಸುವಿಕೆಗೆ ಈ ಪರಿಸ್ಥಿತಿಯು ದೇವರ ಸ್ವಭಾವ ಹಾಗೂ ಅವರ ಪಾಪದ ಸ್ಥಿತಿಯ ಕಾಣರದಿಂದಾಗಿತ್ತು, ದೇವರು ಪರಿಪೂರ್ಣ ಪವಿತ್ರನಾಗಿದ್ದಾನೆ; ಅವರು ಪಾಪಿಗಳಾದರು (ಅಪವಿತ್ರರಾದರು) ... ಒಮ್ಮೆ ಪಾಪವು ಕಂಡು ಕೊಂಡಾಗ, ಬೇರ್ಪಡಿಸುವಿಕೆಯು ಅತ್ಯಗತ್ಯವಾಗಿತ್ತು. ಅದಕ್ಕೆ ಮೊದಲು ಎಚ್ಚರಿಕೆಯಿತ್ತು ಹಾಗೂ ಅದರ ನಂತರ ಒಂದು ವಾಗ್ದಾನವಿತ್ತು. (ಆದಿಕಾಂಡ 2:17; 3:15) ಆದಿಕಾಂಡ 3ರಲ್ಲಿ ನಾವು ಓದುವಂಥದ್ದು ಸರ್ವಜ್ಞಾನಿ ಹಾಗೂ ಪ್ರೀತಿಸುವ ದೇವರಿಂದ *ಬೇರ್ಪಡಿಸುವಿಕೆಯು ಕೈಕೊಳ್ಳಲ್ಪಟ್ಟ ಮಾರ್ಗವಾಗಿತ್ತು.* ಈ ಬೇರ್ಪಡಿಸುವಿಕೆಯು ಯಾಂತ್ರಿಕವಾದ ನಾಶಗೊಳಿಸಲ್ಪಡುವಿಕೆಯಾಗಿರಲಿಲ್ಲ. ಅದು ಪಾಪದ ಅನಿವಾರ್ಯ ಪ್ರತಿಫಲವಾಗಿತ್ತು. ಪಾಪವು ನಾವು ಮೇಲೇರದಂಥ ಆತಂಕವನ್ನು ಸೃಷ್ಟಿಸುತ್ತದೆ (ಯೆಶಾಯ 59:1, 2) "ಪಾಪದ ಸಂಬಳ ಮರಣವಾಗಿದೆ" (ರೋಮಾಪುರ 6:23ಎ) ಮನುಷ್ಯನಲ್ಲಿ ಪಾಪವು ಕಂಡುಬಂದದ್ದರೊಂದಿಗೆ ದೇವರು ವ್ಯವಹರಿಸಿದ ಮಾರ್ಗವನ್ನು ನಾವು ಅನುಸರಿಸಿದಂತೆ ಯುಗಗಳಲ್ಲೆಲ್ಲಾ ಈ ತತ್ವವು ಕಾರ್ಯಮಾಡುತ್ತದೆ.

ಮೊದಲನೆಯ ಯುಗವು ಮಾನವರು ದೇವರ ಸ್ವರೂಪದಲ್ಲಿ ಉಂಟು ಮಾಡುವದರೊಂದಿಗೆ ಪ್ರಾರಂಭವಾಯಿತು. ಅವರು ಪಾಪಿಗಳಾಗುವ ವರೆಗೆ ಅದು ಯಾವ ಆತಂಕ ವಿಲ್ಲದೇ ಮುಂದುವರಿಯಿತು, ಸೃಷ್ಟಿಯ ಮತ್ತು ಪತನದ ಮಧ್ಯದಲ್ಲಿಯ ಅವಧಿಯು ಸಾಂಬಂಧಿಕವಾಗಿ ಅಲ್ಪವಾಗಿತ್ತೆಂದು ನಾವು ಯೋಚಿಸುತ್ತೇವೆ. ಬಹುಶ ಅದು ಆದಿಕಾಂಡದ ಮೊದಲಿನ ಮೂರು ಅಧ್ಯಾಯಗಳಲ್ಲಿ ಹೇಳಿ ಮುಗಿಸಲ್ಪಟ್ಟಿದ್ದು ಕಾರಣವಾಗಿರಬಹುದು. ನಿಜವಾಗಿ, ಒಂದೇ ಕಾರಣಕ್ಕಾಗಿ ಅವರು ತೋಟದಲ್ಲಿದ್ದ ಅವಧಿಯ ಬಗ್ಗೆ ಕ್ರಿಸ್ತನ ಎರಡನೆಯ ಬರೋಣದ ಬಗ್ಗೆ ನಾವು ಸಮಯವನ್ನು ತಿಳಿಯದೇ ಇರುವಂತೆ ಹೇಳಲ್ಪಟ್ಟಿರುವದಿಲ್ಲ, ಅವರು ತೋಟದಿಂದ ಹೊರಗೆ ಹಾಕಲ್ಪಟ್ಟನಂತರ ಅವರ ಮುಂದಿನ ಸ್ಥಿತಿಯ ಬಗ್ಗೆ ಚಿಂತಿಸುವುದನ್ನು ಮುಂದುವರಿಸಿದನು. ಹೀಗೆ ದೇವರೊಂದಿಗೆ ಮತ್ತು ಆತನ ಮಾನವ ಸೃಷ್ಟಿಯೊಂದಿಗೆ ಮಧ್ಯದಲ್ಲಿಯ ಅನ್ಯೋನ್ಯತೆಯು ಭಿನ್ನವಾದ ಲಕ್ಷಣ ತೆಗೆದು ಕೊಂಡಿತು. ಆದಾಮ ಮತ್ತು ಹವ್ವರು ಪಾಪ ಮಾಡುವ ಮೊದಲು ಅದು ನೇರವಾಗಿತ್ತು, "ಸಂಭಾಷಣೆಯಂತೆ ಇತ್ತು," ತಕ್ಷಣದ್ದಾಗಿತ್ತು, ಅವರು ಪಾಪಮಾಡಿದ ನಂತರ ವ್ಯಕ್ತಿಗಳು ದೇವರಿಗೆ ತಮ್ಮ ಯಜ್ಞಗಳನ್ನು ಅರ್ಪಿಸಲು ಮತ್ತು ಆತನ ಹೆಸರನ್ನು ಕರೆಯಲು

ಪ್ರಾರಂಭಿಸಿದರು (ಆದಿಕಾಂಡ 4:3, 4, 26ಬಿ) ಪಾಪವು ಬೇರ್ಪಡಿಸಿತು, ದೇವರು ನಾಶಪಡಿಸಲಿಲ್ಲ ಎಂದು ಬೇರೆ ಮಾತುಗಳಲ್ಲಿ ಹೇಳಬಹುದು. ದೇವರು ಮಾನವಕುಲದ ವಿಶ್ವ ತಂದೆಯಾಗಿ ಮುಂದುವರಿಯುವನು. ಆದರೆ ಅವರ ಪಾಪಭರಿತ ಸ್ಥಿತಿಯ ನಿಮಿತ್ತವಾಗಿ ದೇವರೊಂದಿಗೆ ಪೂರ್ಣ ಅನ್ಯೋನ್ಯತೆಯಲ್ಲಿರಲು ಅವರಿಗೆ ಸಂಬಂಧವು ಸಾಕಷ್ಟಿರಲಿಲ್ಲ.

## ಸಿದ್ಧತೆಯ ಕಾರ್ಯವಿಧಾನ

ದೇವರು ಆಯ್ಕೆಯ ಕಾರ್ಯ ವಿಧಾನವನ್ನು (ಈ ವಾಗ್ದಾನದಿಂದ/ಒಡಂಬಡಿಕೆ ಯಿಂದ) ಪ್ರಾರಂಭಿಸಿದಾಗ ಆತನು ವಿಶ್ವದ ತಂದೆಯಾಗಿರುವುದು ನಿಂತುಹೋಯಿತು ಎಂದರ್ಥವಾಗುವದಿಲ್ಲ. ಹೀಗಿದ್ದರೂ ಆತನ ಮುಂದುವರಿದ ಚಟುವಟಿಕೆಯು, ತನ್ನ ವಿಶ್ವ ಪಿತೃತ್ವವು ಮಾನವತೆಯ ಉಳಿಯುವಿಕೆಗಾಗಿ ತಳಹದಿಯಂತೆ ಆತನು ಯೋಚಿಸಲಿಲ್ಲ ಎಂಬುದನ್ನು ತೋರಿಸುತ್ತದೆ. ಆದುದರಿಂದ ಆದಿಕಾಂಡ 3:15ರಲ್ಲಿಯ ಆತನ ಮೊದಲಿನ ವಾಗ್ದಾನಗಳ ಮೇಲೆ ಅವಲಂಭಿಸಿ, ನೋಹನಿಗೆ ವಾಗ್ದಾನ ಮತ್ತು ಒಡಂಬಡಿಕೆಯ ಮುಖಾಂತರ ಮಾನವ ಕುಲದೊಂದಿಗೆ ವ್ಯವಹರಿಸಲು ಆತನು ಪ್ರಾರಂಭಿಸಿದನು.

> "ಇಗೋ, ನಾನಂತೂ ಭೂಮಿಯ ಮೇಲೆ ಜಲಪ್ರಳಯವನ್ನು ಬರಮಾಡಿ ಆಕಾಶದಕೆಳಗಿರುವಸಕಲ ಪ್ರಾಣಿಗಳನ್ನೂ ಅಳಿಸಿಬಿಡುವೆನುಣಿ ಭೂಮಿಯಲ್ಲಿರುವ ಸಮಸ್ತವೂ ಲಯವಾಗುವುದು. ಆದರೆ ನಿನ್ನ ಕೂಡ ನನ್ನ ನಿಬಂಧನೆಯನ್ನು ಮಾಡುತ್ತೇನೆ. ನಿನ್ನ ಹೆಂಡತಿ, ನಿನ್ನ ಗಂಡುಮಕ್ಕಳು ಹಾಗೂ ಸೊಸೆಯರು ಸಹಿತವಾಗಿ ನೀನು ನಾವೆಯಲ್ಲಿ ಸೇರಬೇಕು" (ಆದಿಕಾಂಡ 6:17, 18).
>
> ಆಗ ನೋಹನು ಕರ್ತನಿಗೋಸ್ಕರ ಯಜ್ಞವೇದಿಯನ್ನು ಕಟ್ಟಿ ಅದರ ಮೇಲೆ ಶುದ್ಧವಾದ ಎಲ್ಲಾ ಪಶುಪಕ್ಷಿ ಜಾತಿಗಳಲ್ಲಿ ಸರ್ವಾಂಗಹೋಮ ಮಾಡಿದನು. ಅದರ ಸುವಾಸನೆಯು ಯೆಹೋವನಿಗೆ ಗಮಗಮಿಸಲು ಆತನು ಹೃದಯದೊಳಗೆ, "ಮನುಷ್ಯರ ಮನಸ್ಸಿನ ಸಂಕಲ್ಪವು ಚಿಕ್ಕಂದಿನಿಂದಲೇ ಕೆಟ್ಟದ್ದುಣಿ ಆದರೂ ನಾನು ಇನ್ನು ಮೇಲೆ ಅವರ ನಿಮಿತ್ತವಾಗಿ ಭೂಮಿಯನ್ನು ಶಪಿಸುವುದಿಲ್ಲ. ನಾನು ಎಲ್ಲಾ ಜೀವಿಗಳನ್ನು ಈಗ ಸಂಹರಿಸಿದಂತೆ ಇನ್ನು ಮೇಲೆ ಸಂಹರಿಸುವದಿಲ್ಲ" (ಆದಿಕಾಂಡ 8:20, 21).
>
> ಇದಲ್ಲದೆ ದೇವರು ನೋಹನಿಗೂ ಅವನ ಮಕ್ಕಳಿಗೂ, "ಕೇಳಿರಿ, ನಾನು ನಿಮ್ಮನ್ನು ನಿಮ್ಮ ಸಂತತಿಯವರನ್ನೂ ನಿಮ್ಮ ಕೂಡ ನಾವೆಯಿಂದ ಹೊರಟು ಬಂದ ಪಶುಪಕ್ಷಿ ಮೃಗ ಭೂಜಂತುಗಳನ್ನು ಕುರಿತು ಸ್ಥಿರಪ್ರತಿಜ್ಞೆ ಮಾಡುತ್ತೇನೆಣಿ ಆ ಪ್ರತಿಜ್ಞೆ ಯಾವುದೆಂದರೆ - ಇನ್ನು ಮೇಲೆ ಎಲ್ಲಾ ಪ್ರಾಣಿಗಳು ಪ್ರಳಯದಿಂದ ನಾಶವಾಗುವದಿಲ್ಲಣಿ ಇನ್ನು ಮುಂದೆ ಭೂಮಿಯನ್ನು ಹಾಳುಮಾಡುವ ಪ್ರಳಯವು ಬರುವುದೇ ಇಲ್ಲ" ಎಂದು ಹೇಳಿದನು. "ನಾನು ನಿಮ್ಮನ್ನೂ ನಿಮ್ಮ ಸಂಗಡ ಇರುವ ಸಮಸ್ತ ಜೀವರಾಶಿಗಳನ್ನೂ ಕುರಿತು ಎಲ್ಲಾ ತಲತಲಾಂತರಗಳಲ್ಲಿಯೂ ಮಾಡುವ ಈ ಪ್ರತಿಜ್ಞೆಗೆ ಮೇಘಗಳಲ್ಲಿ ನಾನಿಟ್ಟಿರುವ ಮುಗಿಲುಬಿಲ್ಲೇ ಗುರುತಾಗಿರುವುದು. ನನಗೂ ಭೂಪ್ರಾಣಿಗಳಿಗೂ ಆದ ಒಡಂಬಡಿಕೆಗೆ ಇದೇ ಗುರುತಾಗಿರಲಿ" ಎಂದೂ ದೇವರು ಹೇಳಿದನು (ಆದಿಕಾಂಡ 9:8-13).

ಈ ವಾಗ್ದಾನದ/ಒಡಂಬಡಿಕೆಯ ಅರ್ಥವು ದೇವರು ಪುನ ಎಂದೂ ಜಲಪ್ರಳಯದಲ್ಲಿ ಮಾಡಿದಂತೆ - ಮಾನವ ಕುಲವನ್ನು ನಾಶ ಮಾಡುವದಿಲ್ಲ ಎಂದಾಗುತ್ತದೆ. ಆದುದರಿಂದ, ದೇವರಿಂದ ತನ್ನ ಸೃಷ್ಟಿಗೆ ಈ ಲಾಭಕ್ಕೆ ಮಾನವರ ದೈಹಿಕ ಜೀವನಕ್ಕೆ

ಸಂಬಂಧಿಸಿರುವುದು ಸ್ಪಷ್ಟವಾಗಿದೆ. ಸಾರ್ವತ್ರಿಕ ದೇವರಿಂದ ಇದು ಉನ್ನತವಾದ ಮತ್ತು ಕೃಪಾಪೂರ್ಣವಾದ ಕೊಡುಗೆಯಾಗಿತ್ತು. ಅದು ಶುಭವಾರ್ತೆಯಾಗಿತ್ತುಣಿ ಅದು ಶರತ್ತುಗಳು ಇಲ್ಲದ್ದಾಗಿತ್ತು. ಅದು "ಸದಾಕಾಲಕ್ಕೂ" ಇರುವಂಥದ್ದಾಗಿದೆ. ಇಂದು ಲೋಕವು ಇರುವವರೆಗೆ ಜಲಪ್ರಳಯದ ನಾಶನದಲ್ಲಿ ಸಂಪೂರ್ಣವಾಗಿ ಕೊಚ್ಚಿ ಹೋದಂತೆ ಹೋಗುವದಿಲ್ಲ ಎಂಬ ಭರವಸೆಯಲ್ಲಿ ನಾವು ಇರಬಹುದು. ಮಾನವತೆಯ ಪ್ರಾಪಂಚಿಕ ಉಳಿಹು ಅಂತಿಮ ಉಳಿದುಕೊಳ್ಳುವಿಕೆಯಾಗಿರದಿದ್ದರೂ ಅದು ದೇವರು ಆಯ್ಕೆಮಾಡುವ ತಂದೆಯಂತೆ ತನ್ನ ಮಹಾ ವೈಭವದ ಪಾತ್ರದ ಮೇಲೆ ಐತಿಹಾಸಿಕ ರಂಗವನ್ನು ಏರ್ಪಡಿಸಿದೆ.

ಪಾಪಭರಿತ ಮಾನವ ಜನಾಂಗವನ್ನು ತಿರುಗಿ ಪಡಕೊಳ್ಳುವ ಆತನ ಐತಿಹಾಸಿಕ ಚರಿತ್ರೆಯಿಂದ ಮುಂದು ವರಿಯುವಂತೆ ಪ್ರತ್ಯೇಕ ಜನಾಂಗವನ್ನು ಆಯ್ದುಕೊಳ್ಳುವಂತೆ - ಹೇಗೆ ದೇವರ ಅನುಗ್ರಹವು ಪ್ರಕಟಿಸಲ್ಪಟ್ಟಿತೆಂಬುದನ್ನು ನಾವು ನೋಡುತ್ತೇವೆ. ಈ ವಿಧಾನವು ಇಬ್ರೀಯನಾದ ಅಬ್ರಹಾಮನಿಂದ ಪ್ರಾರಂಭವಾಯಿತು.[1] ಅಬ್ರಹಾಮನಿಗೆ ತನ್ನ ಆಶೀರ್ವಾದವನ್ನು, ದೊಡ್ಡ ಹೆಸರನ್ನು ಹಾಗೂ ದೇಶವನ್ನು ದೇವರು ವಾಗ್ದಾನ ಮಾಡಿದನು. ಅವನ ಮುಖಾಂತರವಾಗಿ ಎಲ್ಲಾ ಜನಾಂಗಗಳು ಆಶೀರ್ವದಿಸಲ್ಪಡುವವು ಇಲ್ಲವೇ ತಮ್ಮನ್ನು ಆಶೀರ್ವದಿಸಿಕೊಳ್ಳುವವು ಎಂದೂ ಸಹ ಆತನು ವಾಗ್ದಾನ ಮಾಡಿದನು. ಈ ದೊಡ್ಡ ವಿವಿಧತೆಯ ವಾಗ್ದಾನವು ಒಡಂಬಡಿಕೆಯಿಂದ ಮುದ್ರಿಸಲ್ಪಟ್ಟಿತು. ಅಬ್ರಹಾಮನು ಸಂಪೂರ್ಣ ವಿಶ್ವಾಸದೊಂದಿಗೆ ಈ ಎಲ್ಲಾ ಮೆಚ್ಚಿಕೆ ಗಳನ್ನು ಹೊಂದಿಕೊಂಡನು. ಅಬ್ರಹಾಮನ ನಂಬಿಕೆಯನ್ನು ದೇವರು ನೀತಿಯೆಂದು ದೃಷ್ಟಿಸಿದನು. ಅಬ್ರಹಾಮನ ನಂಬಿಕೆಯ ಮುಖಾಂತರ ಎಲ್ಲಾ ಜನಾಂಗಗಳೂ ಆಶೀರ್ವದಿಸಲ್ಪಡುವುದು ದೇವರ ಯೋಜನೆಯಾಗಿತ್ತೆಂದು ಒತ್ತಿ ಹೇಳಬೇಕು.

ಅಬ್ರಹಾಮ ಸಂತತಿಯವರು ಅತಿ ಹೆಚ್ಚು ಸಂಖ್ಯೆ ತಲುಪಿದನಂತರ ಅವರಿಗೆ ಧರ್ಮಶಾಸ್ತ್ರವು ಕೊಡಲ್ಪಟ್ಟಿತ್ತು. ದೇವರಾಯ್ದುಕೊಂಡ ಜನಾಂಗದವರು ಅವರು ಸಿನಾಯಿಯಲ್ಲಿ ಧರ್ಮಶಾಸ್ತ್ರವನ್ನು ಸ್ವೀಕರಿಸಿಕೊಂಡಾಗ ಇಸ್ರಾಯೇಲ್ಯರು ಎಂದು ಕರೆಯಲ್ಪಟ್ಟರು. ಅಬ್ರಹಾಮನ ಮೊಮ್ಮಗ ಯಾಕೋಬನು ತನ್ನ ಹೆಸರನ್ನು ಇಸ್ರಾಯೇಲ ಎಂದು ಬದಲಾಯಿಸಿಕೊಂಡಿದ್ದನು. ಸಿನಾಯಿ ಬಳಿಯಲ್ಲಿ ಧರ್ಮಶಾಸ್ತ್ರವನ್ನು ಸ್ವೀಕರಿಸಿದ ಅವನ ಸಂತತಿಯವರು ಇಸ್ರಾಯೇಲ್ಯರ ಹನ್ನೆರಡು ಗೋತ್ರಗಳು ಇಲ್ಲವೇ ಇಸ್ರಾಯೇಲ್ಯರು ಎಂದು ಕರೆಯಲ್ಪಟ್ಟರು. ಸಿನಾಯಿ ಬೆಟ್ಟದಲ್ಲಿ ಪ್ರಾರಂಭಿಸಿ ಮೋಶೆಯ ಮುಖಾಂತರ ಇಸ್ರಾಯೇಲ್ಯರಿಗೆ ದೇವರು ಕೊಟ್ಟ ಧರ್ಮಶಾಸ್ತ್ರವು ವಿಶೇಷವಾಗಿ ಅವರಿಗಾಗಿತ್ತು. ಇದು ಆಯ್ಕೆಯ ತಂದೆಯ ಕೆಲಸದಲ್ಲಿ ಇನ್ನೊಂದು ಹೆಜ್ಜೆಯಾಗಿತ್ತು. ಅವರು ಆತನು ಆಯ್ದುಕೊಂಡ ಜನಾಂಗವಾಗಿದ್ದರುಣಿ ಮೋಶೆಯ ಧರ್ಮಶಾಸ್ತ್ರವು ಅವರಿಗೆ ದೇವರ ನಿಯಮವಾಗಿತ್ತು. ಭೂಲೋಕದ ಜನಾಂಗಗಳಲ್ಲಿ ಅವರು "ವಿಶೇಷವಾದ" ಜನಾಂಗವಾಗಿ ದ್ದರಿಂದ ದೇವರು ಅವರನ್ನು ಆಯ್ದುಕೊಳ್ಳಲಿಲ್ಲ. ಆದರೆ ದೇವರ ಆಯ್ಕೆಯು ಅವರನ್ನು ಆಯ್ದುಕೊಂಡ ಜನಾಂಗವನ್ನಾಗಿ ಮಾಡಿತು. ಅದರ ಮುಖಾಂತರ ಆತನು ಅವರ ಪಿತೃಗಳಿಗೆ ಅಬ್ರಹಾಮ, ಇಸಾಕ ಹಾಗೂ ಯಾಕೋಬರಿಗೆ ಮಾಡಿದ ವಾಗ್ದಾನವನ್ನು ನೆರವೇರಿಸುವನು (ಧರ್ಮೋಪದೇಶಕಾಂಡ 9:4, 5).

ಆತನ ಪ್ರಕಟಣಾತ್ಮಕ ಯೋಜನೆಯ ಲಕ್ಷಣವು ಒಂದರ ಮೇಲೆ ಒಂದು ಬರುವದನ್ನು ನಾವು ಒತ್ತಿ ಹೇಳುತ್ತೇವೆ. ಈಗ ಆತನು ಆಯ್ಕೆಮಾಡುವ ತಂದೆ ಎಂಬುದನ್ನು ನಾವು ನೋಡುವಾಗ ಆತನು ಪ್ರತಿಯೊಬ್ಬರಿಗೂ ತನ್ನನ್ನು ಚಿಂತಿಸುವಾತನಂತೆ ಪ್ರಕಟಿಸುತ್ತಾನೆ. ಎಲ್ಲರಿಗಾಗಿ ಈ ಚಿಂತನೆಯು ಒಂದು ಜನಾಂಗದ ಮುಖಾಂತರ

ತನ್ನ ಆಯ್ಕೆಯ ವಿಧಾನವನ್ನು ದೇವರು ಕೈಕೊಳ್ಳುವದನ್ನು ಮೂರು ಮುಖ್ಯ ಕ್ಷೇತ್ರಗಳಲ್ಲಿ ಉದಾಹರಿಸಬಹುದು.

*ಮೊದಲನೆಯ ಪ್ರಮುಖ ಕ್ಷೇತ್ರವು ಧರ್ಮಶಾಸ್ತ್ರದ್ದಾಗಿದೆ.* ಮೂರು ಉದಾಹರಣೆಗಳು ಸಾಕಾಗುತ್ತವೆ. ಉದಾಹರಣೆಯು ಕಾನೂನಿನ ನೀತಿ ಶಾಸ್ತ್ರದಲ್ಲಿ ಇರುತ್ತದೆ. ಇಸ್ರಾಯೇಲ್ಯರು ತಮ್ಮ ಮಧ್ಯದಲ್ಲಿಯ ಪರದೇಶಿ ನಿವಾಸಿಗಳನ್ನು ದಂಡಿಸಬಾರದು, ಇಲ್ಲವೇ ಕೆಟ್ಟದ್ದಾಗಿ ನಡಿಸಿಕೊಳ್ಳಬಾರದು (ವಿಮೋಚನಕಾಂಡ 22:21ಣ 23:9ಣ ಯಾಜಕಕಾಂಡ 19:33). ಎರಡನೆಯ ಮೊದಲನೆಯದು ಉದಾಹರಣೆಯು ಉದಾರತೆಗೆ ಸಂಬಂಧಿಸಿದೆ, ಸುಗ್ಗಿಯ ಸಮಯದಲ್ಲಿ ಅವರು ದ್ರಾಕ್ಷೆ ಹಣ್ಣುಗಳಲ್ಲಿ ಕೆಲವನ್ನು ಬಳ್ಳಿಗಳಲ್ಲಿ ಮತ್ತು ನೆಲದ ಮೇಲೆ ಬಿದ್ದ ಹಣ್ಣುಗಳನ್ನು ಬಡವರು ಮತ್ತು ಪರದೇಶಿಗಳು ಆಯ್ದುಕೊಳ್ಳಲಿಕ್ಕೆ ಬಿಡಬೇಕು (ಯಾಜಕಕಾಂಡ 19:10). ಮೂರನೆಯ ಉದಾಹರಣೆಯು ದೇವರು ಎಲ್ಲಾ ಜನರಿಗಾಗಿ ಚಿಂತಿಸುವಾತನಾಗಿರುತ್ತಾನೆ ಹಾಗೂ ಪ್ರತಿಯೊಬ್ಬರಿಂದ ಭಕ್ತಿಯನ್ನು ಅಪೇಕ್ಷಿಸುತ್ತಾನೆಂಬುದನ್ನು ತೋರಿಸುತ್ತದೆ.

> “ಆ ದೂಷಿಸಿದವನನ್ನು ಪಾಳೆಯದ ಹೊರಗೆ ಒಯ್ಯಬೇಕು. ಅವನ ದೂಷಣೆಯ ಮಾತುಗಳನ್ನು ಕೇಳಿದವರೆಲ್ಲರೂ ಅವನ ತಲೆಯ ಮೇಲೆ ತಮ್ಮ ಕೈಗಳನ್ನಿಟ್ಟನಂತರ ಸಮೂಹದವರೆಲ್ಲರೂ ಅವನನ್ನು ಕಲ್ಲೆಸೆದು ಕೊಲ್ಲಬೇಕು.”
>
> “... ಅನ್ಯರಿಗಾಗಲಿ ಸ್ವದೇಶದವರಿಗಾಗಲಿ ಪಕ್ಷಪಾತವಿಲ್ಲದೆ ಒಂದೇ ವಿಧಿಯಿರಬೇಕು. ನಾನು ನಿಮ್ಮ ದೇವರಾದ ಕರ್ತನು” (ಯಾಜಕಕಾಂಡ 24:16, 22).

*ಎಲ್ಲಾ ಜನರಿಗಾಗಿ ದೇವರ ಕಾಳಜಿ ವಹಿಸುವಿಕೆಯನ್ನು ನಾವು ನೋಡುವ ಎರಡನೆಯ ಪ್ರಮುಖ ಕ್ಷೇತ್ರವು ಚರಿತ್ರೆಯಾಗಿದೆ.* ಬೈಬಲಿನ ಪ್ರತಿಯೊಬ್ಬ ವಾಚಕನು ಯೋನನ ಕಥೆಯ ಬಗ್ಗೆ ಪರಿಚಿತಯುಳ್ಳವನಾಗಿದ್ದಾನೆ. ನಾವು ಓದುವದಕ್ಕಿಂತ - ಮುಂಚಿತವಾಗಿ ನಮ್ಮಲ್ಲಿ ಹೆಚ್ಚಾದವರು ಯೋನನ ಬಗ್ಗೆ ಮತ್ತು ದೊಡ್ಡ ಮೀನು ಅವನನ್ನು ನುಂಗಿದ್ದರ ಬಗ್ಗೆ ಕೇಳಿದ್ದೇವೆ. ಕ್ರಿಸ್ತ ಪೂರ್ವ ಎಂಟನೆಯ ಶತಮಾನದಲ್ಲಿ ನಜರೇತಿಗೆ ಸಮೀಪದ ಒಂದು ಗ್ರಾಮದಲ್ಲಿ ಅವನು ಜೀವಿಸಿದನು. ಆ ಸಮಯದಲ್ಲಿ ಎರಡನೆಯ ಯಾರೊಬ್ಬಾಮನು ಇಸ್ರಾಯೇಲಿನ ಅರಸನಾಗಿದ್ದನು. ಅಶ್ಶೂರ ಸಾಮ್ರಾಜ್ಯದ ರಾಜಧಾನಿಯಾದ ನಿನೆವೆಯ ಜನರು ದುಷ್ಟರಾಗಿದ್ದರಿಂದ ಅವರಿಗೆ ನಾಶನದ ಸಂದೇಶವನ್ನು ಸಾರಲು ದೇವರು ಯೋನನನ್ನು ಕಳುಹಿಸಿದನು. ಹೋಗಲು ಅವನಿಗೆ ಇಷ್ಟವಿಲ್ಲದಿದ್ದರೂ ದೇವರ ಅಪ್ಪಣೆಗೆ ಅನಂತರದಲ್ಲಿ ವಿಧೇಯನಾಗಿ ಆ ಪಟ್ಟಣದಲ್ಲಿ ಪ್ರಸಂಗಿಸಿದನು. ದೇವರ ಕೋಪದಿಂದ ತಪ್ಪಿಸಿಕೊಳ್ಳಲು ಮಾನಸಾಂತರ ಪಡಬೇಕೆಂಬುದನ್ನು ಒಳಗೊಂಡ ಸಂದೇಶವನ್ನು ನಿನೆವೆಯವರು ಅರ್ಥ ಮಾಡಿಕೊಂಡರು. ಅವರು ಮಾನಸಾಂತರ ಪಟ್ಟರು ಮತ್ತು ದೇವರಿಗೆ ಪ್ರಾರ್ಥನೆ ಮಾಡಿದರುಣ ಆದುದರಿಂದ ಅವರು ಉಳಿಸಲ್ಪಟ್ಟರು.

ದೇವರು ಆಯ್ದುಕೊಳ್ಳದೇ ಇದ್ದ ದೇಶದ ಜನರ ಹಿತಕ್ಕಾಗಿ ದೇವರು ಹೇಗೆ ಒದಗಿಸಿದನು ಎಂಬುದನ್ನು ಮೊದಲನೆಯ ಕ್ಷೇತ್ರ ತೋರಿಸುತ್ತದೆ. ಅವರು ಸ್ವೇಚ್ಛೆಯಿಂದ ತಮ್ಮನ್ನು ಧರ್ಮಶಾಸ್ತ್ರದ ಅಧೀನತೆಯಲ್ಲಿ ಇಟ್ಟುಕೊಂಡು, ಅದರ ನಿಯಮಗಳನ್ನು ಅನುಸರಿಸುತ್ತ ಅದರ ಲಾಭಗಳನ್ನು ಪಡೆಯಬಹುದು. ಇದನ್ನು ಮಾಡುವದರಿಂದ ಅವರು ಇಸ್ರಾಯೇಲಿನ ದೇವರಲ್ಲಿ - *ಯೆಹೋವನಲ್ಲಿ* ತಮ್ಮ ನಂಬಿಕೆಯನ್ನು ಪ್ರಕಟಿಸುತ್ತಿದ್ದರು.

ಇಸ್ರಾಯೇಲ್ಯರಂತೆ ಧರ್ಮಶಾಸ್ತ್ರಕ್ಕೆ ಅಧೀನರಲ್ಲದವರಿಗೆ ಇಲ್ಲವೇ ವಾಸವಾಗಿದ್ದ

ಪರದೇಶಿಯಾದವರಿಗೆ ನಿರೀಕ್ಷೆಯ ಸಂದೇಶವನ್ನು ದೇವರು ಒದಗಿಸಿ ಕೊಟ್ಟದ್ದನ್ನು ಎರಡನೆಯ ಕ್ಷೇತ್ರವು ತೋರಿಸುತ್ತದೆ. ಅಶ್ಶೂರ್ಯರು ದೇವರಲ್ಲಿ ನಂಬಿಕೆಯಿಟ್ಟು ಆತನ ಘೋಷಿತ ವಾಕ್ಯಕ್ಕೆ ವಿಧೇಯತೆ ತೋರಿಸಿದ್ದರಿಂದ ಅವರು ಉಳಿಸಲ್ಪಟ್ಟರು (ಯೋನ 3:5, 10). ನಾವು ಅಧ್ಯಯನ ಮಾಡುತ್ತಿರುವ ಯುಗಗಳಲ್ಲಿ ಅಸ್ತಿತ್ವದಲ್ಲಿದ್ದ ಭೂಲೋಕದ ಜನರಲ್ಲಿ ಬಹು ದೊಡ್ಡ ಸಂಖ್ಯಾತರು ಅಶ್ಶೂರ್ಯರ ಸ್ಥಿತಿಯಲ್ಲಿ ಇದ್ದಾರೆಂಬುದನ್ನು ಮರೆಯುವುದು ಸುಲಭವಾಗಿದೆ. ಅವರು ತಿಳಿದುಕೊಂಡಿದ್ದ ಆತ್ಮಿಕ ತಳಹದಿಯ ಮೇಲೆ ಅವರು ದೇವರಿಗೆ ಉತ್ತರ ಕೊಡಬೇಕಾಗಿತ್ತು. ಜನರ ಈ ದೊಡ್ಡ ಸಂಖ್ಯೆಯು ಪೌಲನಿಂದ ಹೇಳಲ್ಪಟ್ಟ ಅನ್ಯಜನಾಂಗ ಜಗತ್ತಿನ ಭಾಗವಾಗಿತ್ತು ಎಂದು ಬೇರೆ ಮಾತುಗಳಲ್ಲಿ ಹೇಳಬಹುದು:

> ಧರ್ಮಶಾಸ್ತ್ರವಿಲ್ಲದ ಅನ್ಯಜನರು ಸ್ವಾಭಾವಿಕವಾಗಿ ಧರ್ಮಶಾಸ್ತ್ರದಲ್ಲಿ ಹೇಳಿದಂತೆ ನಡೆದರೆ ಅವರು ಧರ್ಮಶಾಸ್ತ್ರವಿಲ್ಲದವರಾಗಿದ್ದರೂ ತಾವೇ ತಮಗೆ ಧರ್ಮಪ್ರಮಾಣವಾಗಿದ್ದಾರೆಃ ಹೇಗಂದರೆ ಅವರು ಧರ್ಮಶಾಸ್ತ್ರದ ಮುಖ್ಯ ತಾತ್ಪರ್ಯ ತಮ್ಮ ಹೃದಯದಲ್ಲಿ ಬರೆದದೆ ಎಂಬುದನ್ನು ತೋರ್ಪಡಿಸುತ್ತಾರೆ. ಇದಕ್ಕೆ ಅವರ ಮನಸ್ಸು ಸಹ ಸಾಕ್ಷಿ ನುಡಿಯುತ್ತದೆಃ ಅದರ ಯೋಚನೆಗಳು ವಾದಿ ಪ್ರತಿವಾದಿಗಳಂತೆ ಇದು ತಪ್ಪೆಂದು ತಪ್ಪಲ್ಲವೆಂದು ಸೂಚಿಸುತ್ತವೆ. ನಾನು ಸಾರುವ ಸುವಾರ್ತೆಯಲ್ಲಿ ಬೋಧಿಸಿರುವ ಪ್ರಕಾರ ದೇವರು ಯೇಸು ಕ್ರಿಸ್ತನ ಮೂಲಕವಾಗಿ ಮನುಷ್ಯರ ಗುಟ್ಟುಗಳನ್ನು ಹಿಡಿದು ವಿಚಾರಿಸುವ ದಿನವು ಬರುತ್ತದೆ. ಆ ದಿನದಲ್ಲಿ ಇದೆಲ್ಲಾ ತಿಳಿದು ಬರುವುದು (ರೋಮಾಪುರ 2:14-16ಃ ಹೆಚ್ಚಿನ ಹಿನ್ನೆಲೆಗಾಗಿ ಓದಿರಿ: ರೋಮಾಪುರ 1:18-2:16).

ಸಾರ್ವತ್ರಿಕ ತಂದೆಯಾಗಿ ದೇವರು ತನ್ನ ಮಾನವ ಕುಟುಂಬವನ್ನು ಪ್ರೀತಿಸುತ್ತಾನೆ. ಹಾಗೆಯೇ ಅದೇ ಸಮಯದಲ್ಲಿ ಯಾರ ಮುಖಾಂತರವಾಗಿ ತನ್ನ ಅದ್ಭುತ ಕಾರ್ಯಗಳನ್ನು ಮಾಡಿದನೋ ಆ ಇಬ್ರಿಯರ ಆಯ್ಕೆಯ ತಂದೆಯಾಗಿಯೂ ಇರುತ್ತಾನೆ.

*ಎಲ್ಲಾ ಜನರಿಗಾಗಿ ದೇವರ ಕಾಳಜಿಯನ್ನು ನೋಡುವ ಮೂರನೆಯ ಪ್ರಮುಖ ಕ್ಷೇತ್ರವು ಪ್ರವಾದನೆ.* ದೇವರು ತಾನಾಯ್ದುಕೊಂಡ ಜನಾಂಗವನ್ನು ನಡಿಸಿದಂತೆ ಆತನು ನಿಧಾನವಾಗಿ ತನ್ನ ವಾಗ್ದಾನದ ಮುಖಾಂತರ ಅವರ ಕಣ್ಣುಗಳನ್ನು ಭವಿಷ್ಯದ ಕಡೆಗೆ ತೆರೆಯಲು ಪ್ರಾರಂಭಿಸಿದನು. ತನ್ನ ಜನಾಂಗವನ್ನು ಆಯ್ದುಕೊಂಡಾಗ ಮಾಡಿದ ವಾಗ್ದಾನಗಳನ್ನು ನಂಬಿಗಸ್ತಿಕೆಯಿಂದ ಕಾಪಾಡಿಕೊಂಡು ಬಂದನು. *ಈ ವಾಗ್ದಾನಗಳು ಒಡಂಬಡಿಕೆಯಿಂದ ರೂಪಿಸಲ್ಪಟ್ಟವುಗಳು ಬಹಳವಾಗಿ ಲೋಕಕ್ಕೆ ಸಂಬಂಧಿಸಿದವುಗಳೂ ಸ್ವಭಾವದಲ್ಲಿ ಶರತ್ತುಗಳನ್ನು ಒಳಗೊಂಡವುಗಳೂ ಆಗಿದ್ದವು.* ಹೆಚ್ಚಾದವುಗಳು ನಿತ್ಯವಾದವುಗಳಾಗಲೀ ಇಲ್ಲವೇ ರದ್ದುಪಡಿಸದಂಥವುಗಳಾಗಲೀ ಆಗಿರಲಿಲ್ಲ. ಉದಾಹರಣೆಯಾಗಿ "ಹಿಬ್ರೂ ಜನಾಂಗದ ತಂದೆಯಾಗಿ" ಅಬ್ರಹಾಮನನ್ನು ದೇವರು ಆಯ್ಕೆಮಾಡಿಕೊಂಡನು. ಆತನ ಆಯ್ಕೆಯು ವಾಗ್ದಾನದಿಂದ ಪ್ರಕಟಿಸಲ್ಪಟ್ಟಿತು (ಆದಿಕಾಂಡ 12:1-3). ಹಾಗಿದ್ದರೂ ಅದಕ್ಕೆ ಶರತ್ತುಗಳು ಕೂಡಿಸಲ್ಪಟ್ಟಿದ್ದವು. ಕೈಕೊಳ್ಳಬೇಕಾದ ಒಡಂಬಡಿಕೆಯಿತ್ತು. ಇದಲ್ಲದೆ "ದೇವರು ಅಬ್ರಹಾಮನಿಗೆ, 'ನೀನಂತೂ *ನನ್ನ ಒಡಂಬಡಿಕೆಯನ್ನು ಕೈಕೊಂಡು ನಡೆಯಬೇಕು.* ನೀನು ಮಾತ್ರವಲ್ಲದೆ ನಿನ್ನ ಸಂತತಿಯವರೂ ಎಲ್ಲಾ ತಲತಲಾಂತರಗಳಲ್ಲಿ ಅದನ್ನು ಕೈಕೊಂಡು ನಡೆಯಬೇಕು' " ಎಂದು ಹೇಳಿದನು (ಆದಿಕಾಂಡ 17:9). ಸುನ್ನತಿಯು ಒಡಂಬಡಿಕೆಯ ಸಂಕೇತವಾಗಿತ್ತು. ಅಬ್ರಹಾಮನು ದೇವರನ್ನು ಸಂಪೂರ್ಣವಾಗಿ ನಂಬಿದನು. ಅಬ್ರಹಾಮನು ತನ್ನ ವಿಶ್ವಾಸದ ಪರೀಕ್ಷೆಯಲ್ಲಿ ಸ್ಥಿರವಾಗಿ ನಿಂತುಕೊಂಡಾಗ, ದೇವರು ಅವನಿಗೆ, "*ನೀನು ನನ್ನ ಮಾತನ್ನು*

*ಕೇಳಿದ್ದರಿಂದ* ಭೂಮಿಯ ಎಲ್ಲಾ ಜನಾಂಗಗಳಿಗೂ ನಿನ್ನ ಸಂತತಿಯ ಮೂಲಕ ಆಶೀರ್ವಾದ ವುಂಟಾಗುವದು" ಎಂದು ಹೇಳಿದನು (ಆದಿಕಾಂಡ 22:18).

ಮೋಶೆಯ ಧರ್ಮಶಾಸ್ತ್ರವು ದೇವರ ವಾಗ್ದಾನ/ಸಿನಾಯಿಯ ಬಳಿಯಲ್ಲಿ ಪ್ರಾರಂಭವಾದ ತನ್ನ ಜನರೊಂದಿಗಿನ ಒಡಂಬಡಿಕೆಯ ಸಂಬಂಧದ ಭಾಗವಾಗಿತ್ತು. ಅದು ನಿಯಮದ ರೂಪದಲ್ಲಿದ್ದರೂ ಸಹ ವಾಗ್ದಾನಗಳನ್ನು ಒಳಗೊಂಡಿತ್ತು. ದೇವರ ಆಯ್ದುಕೊಂಡ ಜನಾಂಗದ ಈ ವಾಗ್ದಾನಗಳು ನಿತ್ಯವಾದವುಗಳಾಗಿ ಇಲ್ಲವೇ ಶರತ್ತುಗಳು ಇಲ್ಲದವುಗಳಾಗಿ ರೂಪಿಸಲ್ಪಟ್ಟಿರಲಿಲ್ಲ. ಉದಾಹರಣೆಯಾಗಿ ಆಜ್ಞೆಗಳಲ್ಲಿ ಒಂದು ಈ ಭೂಲೋಕದ ವಾಗ್ದಾನ ವನ್ನು ಒಳಗೊಂಡಿತ್ತು. "ನಿನ್ನ ತಂದೆ ತಾಯಿಗಳನ್ನು ಸನ್ಮಾನಿಸಬೇಕುಣಿ ಸನ್ಮಾನಿಸಿದರೆ ನಿನ್ನ ದೇವರಾದ ಯೆಹೋವನು ನಿನಗೆ ಅನುಗ್ರಹಿಸುವ ದೇಶದಲ್ಲಿ ನೀನು ಬಹುಕಾಲ ಇರುವಿ" (ವಿಮೋಚನಕಾಂಡ 20:12). ಅನೇಕ ಉದಾಹರಣೆಗಳನ್ನು ಕೂಡಿಸಬಹುದು. ವಿವರಣೆ ಹಾಗೂ ಸ್ಪಷ್ಟತೆಗಾಗಿ, ಧರ್ಮೋಪದೇಶಕಾಂಡ 26:16-30:20ರಲ್ಲಿ ಕಂಡು ಬರುವ ಮಹಾ ಒಡಂಬಡಿಕೆಯು ಕೊಡಲ್ಪಟ್ಟ ದೃಶ್ಯಗಳನ್ನು ನೋಡೋಣ. ಇಲ್ಲಿ ದೇವರ ಪರವಾಗಿ ವಾಗ್ದಾನ/ವಿಧೇಯತೆ/ಧರ್ಮಶಾಸ್ತ್ರದ ಪೂರ್ಣ ಸಂಬಂಧವನ್ನು ಮತ್ತು ಆತನ ಜನಾಂಗದ ಭಾಗವಾಗಿ ನಂಬಿಕೆಯನ್ನು/ವಿಧೇಯತೆಯನ್ನು ನಾವು ನೋಡುತ್ತೇವೆ. ಸಂಬಂಧವನ್ನು ಕಾದುಕೊಂಡು ಹೋಗುವಲ್ಲಿ ಸೋತುಹೋಗುವದರಿಂದ ನಾಶನವನ್ನು ನೋಡುತ್ತೇವೆ. ಪುನ ಇಸ್ರಾಯೇಲ್ಯರಿಗೆ ಕೊಡಲ್ಪಟ್ಟ ಆಶೀರ್ವಾದಗಳು ಲೌಕಿಕ ಸ್ವಭಾವವನ್ನು ಒತ್ತಿಹೇಳುತ್ತವೆ.

ಮೇಲಿನ ಎಲ್ಲಾ ಭಾವನೆಗಳು ದೇವರ ಜನಾಂಗವು ಪೂರ್ಣವಾಗಿ ಸಮಾಧಿಯ ಆಚೆಗಿನ ಜೀವನದ ಬಗ್ಗೆ ತಿಳಿದವರಾಗಿರಲಿಲ್ಲ ಇಲ್ಲವೇ "ಅನಂತರದ ಜೀವನದಲ್ಲಿ" ವಿಸ್ತರಿಸುವ ದೇವರು ಕೊಡುವ ಆಶೀರ್ವಾದಗಳ ಬಗ್ಗೆ ತಿಳಿದವರಾಗಿರಲಿಲ್ಲ ಎಂದು ಅರ್ಥವಾಗುವದಿಲ್ಲ. ಹೀಗಿದ್ದರೂ ವಿಶೇಷವಾಗಿ ಪ್ರವಾದಿಗಳ ಮಾತುಗಳಿಗೆ ಒಬ್ಬನು ತಿರುಗದಿದ್ದರೆ, ಈ ತತ್ವಗಳು ಎಷ್ಟು ವಿರಳವಾಗಿ ಹೇಳಲ್ಪಟ್ಟಿವೆ ಎಂಬುದು ಆಶ್ಚರ್ಯಕರವಾ ದದ್ದಾಗಿದೆ.

ಅರಸ ದಾವೀದನು ಬತ್ಸೇಬಳಿಂದ ಜನಿಸಿದ ರೋಗಿಯಾದ ತನ್ನ ಮಗುವಿಗಾಗಿ ಪ್ರಾರ್ಥಿಸುವದನ್ನು ಕಂಡುಕೊಳ್ಳುತ್ತೇವೆ. ಮಗುವು ಸತ್ತು ಹೋದ ನಂತರ ದಾವೀದನು ಆರಾಧಿಸುವ ಬಯಕೆಯನ್ನು ವ್ಯಕ್ತಪಡಿಸಿದನು. ಅವನ ಸೇವಕರು ಆಶ್ಚರ್ಯಪಟ್ಟರು. "... ಈಗ ಸತ್ತಿದ್ದನಲ್ಲಾ, ನಾನೇಕೆ ಉಪವಾಸ ಮಾಡಬೇಕು? ಅವನನ್ನು ಹಿಂದಕ್ಕೆ ತರುವುದು ನನ್ನಿಂದಾದೀತೇ? *ನಾನಾಗಿ ಅವನ ಬಳಿಗೆ ಹೋಗಬೇಕೇ* ಹೊರತು ಅವನು ನನ್ನ ಬಳಿಗೆ ಬರುವದಿಲ್ಲ ಎಂದು ಉತ್ತರ ಕೊಟ್ಟನು" (2 ಸಮುವೇಲ 12:23). ಇದು ಅವರಿಗೆ ದಾವೀದನ ವಿವರಣೆಯಾಗಿತ್ತು. ಮರಣದ ನಂತರದ ಜೀವನದಲ್ಲಿ ನಂಬಿಕೆಯನ್ನು ತಿರಸ್ಕರಿಸುವದರ ಉದಾಹರಣೆಯಾಗದಿದ್ದರೂ ಅನೇಕ ವ್ಯಾಖ್ಯಾನಕಾರರಿಂದ ಸ್ವೀಕರಿಸಲ್ಪಟ್ಟಿದೆ.[2]

ಪ್ರವಾದಿಗಳ ಬರಹಗಳ ಇತರ ಹೊರಗಿನ ಹೇಳಿಕೆಗಳು ಮರಣಾನಂತರದ ಜೀವನದ ಒಪ್ಪಿಗೆಯಂತೆ ಬಹಳ ಸಲ ದೃಢಪಡಿಸಲ್ಪಟ್ಟಿದೆ (ನೋಡಿರಿ ಯೋಬ 14:7-14ಣಿ ಕೀರ್ತನೆ 16:9-11ಣಿ 73:24-26). ಅನಂತರದ ಜೀವನವನ್ನು ಒಪ್ಪಿಕೊಳ್ಳುವ ಒಂದು ಸ್ಪಷ್ಟವಾದ ಹೇಳಿಕೆ ಹೀಗಿದೆ: "ದೇವರು ನನ್ನ ಪ್ರಾಣವನ್ನು ಮೃತ್ಯುಹಸ್ತದಿಂದ ತಪ್ಪಿಸುವನುಣಿ ಯಾಕಂದರೆ ಆತನು ನನ್ನನ್ನು ಸ್ವೀಕಾರ ಮಾಡುವನು" (ಕೀರ್ತನೆ 49:15).[3]

ಪ್ರವಾದಿಗಳ ಬರಹಗಳ ಕಡೆಗೆ ನಾವು ತಿರುಗಿಕೊಳ್ಳುವಾಗ ಎರಡು ಹೇಳಿಕೆಗಳು ಒತ್ತಿ ಹೇಳಲ್ಪಡುವವು. ಮೊದಲನೆಯದು ಯೆಶಾಯ 26:19ರಲ್ಲಿ ಕಂಡು ಬರುತ್ತದೆ "ಮೃತರಾದ

ನಿನ್ನ ಜನರು ಬದುಕುವರು, ನನ್ನವರ ಹೆಣಗಳು ಜೀವದಿಂದೇಳುವವು, ಮಣ್ಣಿನಲ್ಲಿ ಪವಳಿಸುವವರೇ, ಎಚ್ಚತ್ತು ಹರ್ಷಧ್ವನಿ ಗೈಯಿರಿ! ನೀನು ಸುರಿಯುವ ಇಬ್ಬನಿಯು ಜ್ಯೋತಿರ್ಮಯವಾದದ್ದು, ಭೂಮಿಯು ಸತ್ತವರನ್ನು ಹೊರಪಡಿಸುವುದು" ಈ ವಚನವು ಬಬಿಲೋನಿನ ಸೆರೆಯಿಂದ ಯೆಹೂದ್ಯರ ಬಿಡುಗಡೆಯನ್ನು ಮತ್ತು ಅವರು ಸ್ವದೇಶಕ್ಕೆ ಹಿಂದಿರುಗಿದ್ದನ್ನು ಹೇಳುವ ಹಿನ್ನೆಲೆಯಲ್ಲಿ ಇರುತ್ತದೆ. ಅವರಿಗೆ ಇದು ಹೊಸ ಏರ್ಪಾಡು, ಜೀವನ, ಸ್ವಾತಂತ್ರ್ಯ ಮತ್ತು ತನ್ನ ಆಲಯದಲ್ಲಿ ತಮ್ಮ ದೇವರೊಂದಿಗೆ ಹೊಸ ಸಂಬಂಧವನ್ನು ಸೂಚಿಸಿತು. ಈ ಅದ್ಭುತಕರವಾದ ಸಮಾಚಾರವು ದೈಹಿಕ ಪುನರುತ್ಥಾನದ ಸಾದೃಶ್ಯದಲ್ಲಿ ಹೇಳಲ್ಪಟ್ಟಿತು. ಯೆಶಾಯನ ವಾಚಕರಿಗೆ ಪುನರುತ್ಥಾನದ ತತ್ವವಿಲ್ಲದಿದ್ದರೆ ಇಲ್ಲವೇ ಪುನರುತ್ಥಾನದಲ್ಲಿ ನಂಬಿಕೆಯಿಲ್ಲದವರಾಗಿದ್ದರೆ ದೇವರ ಜನಾಂಗದ ಸಂಪೂರ್ಣ ಪುನರುಜ್ಜೀವನವನ್ನು ವಿವರಿಸಲು ಪುನರುತ್ಥಾನ ಸಾಮ್ಯವು ಅರ್ಥವಿಲ್ಲದ್ದೂ ತಪ್ಪಾಗಿ ಅರ್ಥಮಾಡಿಕೊಳ್ಳುವಂಥದ್ದೂ ಇಲ್ಲವೇ ತಪ್ಪಾಗಿ ನಡಿಸುವಂಥದ್ದೂ ಆಗುತ್ತಿತ್ತು. ಹೀಗೆ ನಮಗೆ ಇಲ್ಲಿ ಸಾದೃಶ್ಯವಿಲ್ಲದ ವಿಶ್ವಾಸದ ಮೇಲೆ ದೇಹದ ಪುನರುತ್ಥಾನದ ನಿರೀಕ್ಷೆಯು ಬಲವಾದದ್ದಾಗುತ್ತದೆ. ಎರಡನೆಯ ಉಲ್ಲೇಖವು ದಾನಿಯೇಲ 12:2, 3 ಇರುತ್ತದೆ:

> ದೂಳಿನ ನೆಲದೊಳಗೆ ದೀರ್ಘ ನಿದ್ರೆ ಮಾಡುವವರಲ್ಲಿ ಅನೇಕರು ಎಚ್ಚತ್ತು ಕೆಲವರು ನಿತ್ಯಜೀವವನ್ನು, ಕೆಲವರು ನಿಂದನ ನಿತ್ಯ ತಿರಸ್ಕಾರಗಳನ್ನು ಅನುಭವಿಸುವರು. ಜ್ಞಾನಿಗಳು ತೇಜೋಮಯವಾದ ಆಕಾಶಮಂಡಲದಂತೆ ಪ್ರಕಾಶಿಸುವರುಣಿ ಬಹು ಜನರನ್ನು ನೀತಿಯ ಕಡೆಗೆ ತಿರುಗಿಸಿದವರು ಯುಗಯುಗಾಂತರಗಳಲ್ಲಿಯೂ ನಕ್ಷತ್ರಗಳ ಹಾಗೆ ಹೊಳೆಯುವರು.

ಈ ವಾಕ್ಯಗಳು ನಾಲ್ಕು ಪ್ರಮುಖ ಬೋಧನೆಗಳನ್ನು ಒತ್ತಿ ಹೇಳುತ್ತದೆ: (1) ಅನೇಕರಿಗೆ ಪುನರುತ್ಥಾನವು ನಿತ್ಯ ಜೀವನದಲ್ಲಿ ಪರಿಪೂರ್ಣಗೊಳ್ಳುತ್ತದೆ. (2) ಇತರರಿಗೆ, ಅದು ನಾಚಿಕೆಯನ್ನು ಹಾಗೂ ನಿತ್ಯ ತಿರಸ್ಕಾರವನ್ನು ತರುತ್ತದೆ. (3) ಬುದ್ಧಿವಂತರು ಪರಲೋಕದ ಸ್ಥಳದಲ್ಲಿ "ಹೊರಗೆ ನಿಲ್ಲುವರು." (4) ಸುವಾರ್ತಿಕರು, ಅವರು ನೀತಿಗೆ ನಡಿಸಿದವರೊಂದಿಗೆ ಸದಾಕಾಲಕ್ಕೂ ಉಳಿದುಕೊಳ್ಳುವರು.

ಸಾಂಪ್ರದಯಸ್ಥ ಬೈಬಲಿನ ಪಾಂಡಿತ್ಯವು ಯೆಶಾಯನ ಗ್ರಂಥವು ಕ್ರಿ.ಪೂ. ಎಂಟನೆಯ ಶತಮಾನದ ಕೊನೆಯಲ್ಲಿ ಮತ್ತು ಏಳನೆಯ ಶತಮಾನದ ಪ್ರಾರಂಭದಲ್ಲಿ ಹಾಗೂ ದಾನಿಯೇಲನ ಗ್ರಂಥವು ಕ್ರಿ.ಪೂ. ಆರನೆಯ ಶತಮಾನದಲ್ಲಿ ಬರೆಯಲ್ಪಟ್ಟವು ಎಂದು ನಂಬುತ್ತದೆ. ಅಬ್ರಹಾಮನ ಸಮಯದಿಂದ ಎಣಿಕೆ ಮಾಡಿ, ತಡವಾದ ಸಮಯದಲ್ಲಿ ಅನೇಕರಿಗೆ ಮಹಾ ಆಶೀರ್ವಾದವಾಗಿರುವ ಸತ್ತವರ ದೇಹದ ಪುನರುತ್ಥಾನದ ಬಗ್ಗೆ ಪ್ರವಾದಿಕವಾಗಿ ಮಾತನಾಡಲು ದೇವರು ಪ್ರಾರಂಭಿಸಿದನು. ಈ ಅದ್ಭುತಕರವಾದ ನೋಟವು ತೆರೆಯಲ್ಪಟ್ಟಾಗ, ದೇವರಿಗೆ *ಆತ್ಮಿಕ* ತಂದೆಯಂತೆ ತನ್ನ ಪಾತ್ರ ನೆರವೇರಿಸುವ ಸಮಯ ಬಂದಿತು.

## ಪ್ರಕಟಣೆಯ ಪ್ರಗತಿ

ದೇವರನ್ನು ನಿತ್ಯನಾದ ತಂದೆಯಂತೆ (ದೈವತ್ವದಲ್ಲಿ), ಸಾರ್ವತ್ರಿಕ ತಂದೆಯಂತೆ (ಸೃಷ್ಟಿಯಲ್ಲಿ) ಮತ್ತು ಆಯ್ದುಕೊಳ್ಳುವ ತಂದೆಯಂತೆ (ವಾಗ್ದಾನದಲ್ಲಿ/ಒಡಂಬಡಿಕೆಯಲ್ಲಿ) ನೋಡಿದ್ದೇವೆ. ಸಾರ್ವತ್ರಿಕ ತಂದೆಯಾದ ಆತನ ಪಾತ್ರ ಹಾಗೂ ಆಯ್ಕೆಮಾಡುವ ತಂದೆಯಾಗಿ ಆತನ ಪಾತ್ರ ಹೇಗೆ ಒಂದರ ಮೇಲೆ ಒಂದು ಇರುವವು ಎಂಬುದನ್ನು ನೋಡಿದ್ದೇವೆ. ಆಯ್ಕೆ ಮಾಡುವ ತಂದೆಯ ಪಾತ್ರ ಹಾಗೂ ಆತ್ಮಿಕ ತಂದೆಯಾಗಿ ಆತನ

ಪಾತ್ರ ಒಂದರ ಮೇಲೆ ಒಂದು ಅವಲಂಭಿಸಿವೆ ಎಂಬುದನ್ನು ಹೇಳಿದ್ದೇವೆ. ಈಗ ನಾವು ಆತ್ಮಿಕ ತಂದೆಯಂತೆ ದೇವರ ಹೆಚ್ಚು ವಿವರಣೆಗಳ ಅಧ್ಯಯನ ಮಾಡೋಣ.

ಒಂದರ ಮೇಲೆ ಒಂದು ಸಂಗತಿಗಳು ಘಟಿಸುವದರಲ್ಲಿ ದೇವರ ಯೋಜನೆಯು ಪ್ರಕಟಿಸಲ್ಪಟ್ಟರೂ ಅದು ಸತ್ಯದಲ್ಲಿ ಚರಿತ್ರೆಯ ರಂಗದ ಮೇಲೆ ಪ್ರಸಿದ್ಧಪಡಿಸುವ ಒಂದು ಮಹಾ ಯೋಜನೆಯಾಗಿದೆ. ರಿಲೇ ಓಟವು ಉತ್ತಮ ದೃಷ್ಟಾಂತವನ್ನು ಕೊಡುತ್ತದೆ. ರಿಲೇ ಓಟವು ನಿಜವಾಗಿಯೂ ಒಂದೇ ಓಟವಾಗಿದ್ದರೂ ಒಬ್ಬ ಓಟಗಾರನು ಟೀಮಿನ ಇನ್ನೊಬ್ಬ ಸದಸ್ಯನಿಗೆ "ದಂಡವನ್ನು" ಕೊಡುವಾಗ ಒಬ್ಬರನಂತರ ಒಬ್ಬರು ಬರುತ್ತಾರೆ. ಹಾಗೆಯೇ ದೇವರೂ ಸಹ ತನ್ನ ಮೂರು ವ್ಯಕ್ತಿಗಳಲ್ಲಿ ತನ್ನ ಮಹಾಯೋಜನೆಯ ಎಲ್ಲಾ ಹಂತಗಳಲ್ಲಿ ಒಳಗೊಂಡಿದ್ದಾನೆ. ಯೋಜನೆಯಲ್ಲಿ *ತಂದೆಯಾದ ದೇವರು* ಕೇಂದ್ರ ಪಾತ್ರವನ್ನು ಒತ್ತಿ ಹೇಳಲಾಗುತ್ತದೆ. ಆದರೆ ಇದು ಆತನ ಸಂಪೂರ್ಣತೆಯಲ್ಲಿಯ ದೇವರ ಕಾರ್ಯವನ್ನು ಮಿತಿಗೊಳಿಸುವದಾಗಿರುವದಿಲ್ಲ.

ದೇವರ ಪ್ರಗತಿಪರ ಪ್ರಕಟಣೆ ಎಂದು ನಾವು ಕರೆಯುವಂಥದ್ದರಿಂದ ನಮ್ಮ ಅಧ್ಯಯನದಲ್ಲಿ ನಮಗೆ ಬಹಳ ಸಹಾಯ ದೊರೆತಿದೆ. ಪುನರುತ್ಥಾನದ ವಿಷಯದ ಹುಡುಕುವಿಕೆಯಲ್ಲಿ ಇದು ನಮ್ಮ ಗಮನಕ್ಕೆ ಬಂದಿದೆ. ಅದರ ಮೊದಲಿನ ಬೆಳವಣಿಗೆಯಲ್ಲಿ ಮರಣಾನಂತರದ ಜೀವನದ ಭಾವನೆಯಲ್ಲಿ ದೇಹದ ಪುನರುತ್ಥಾನವು ಅವಶ್ಯವಾಗಿ ಒಳ ಗೊಂಡಿರುವದಿಲ್ಲ. ಹಳೇ ಒಡಂಬಡಿಕೆಯಲ್ಲಿ "Sheol" ಎಂಬ ಪದದ ಉಪಯೋಗದ ಸುತ್ತಲಿನ ಅಸ್ಪಷ್ಟತೆಯಿಂದ ಇದು ಬಂದಿರುವದೆಂದು ಕಾಣುತ್ತದೆ.[4] ಹಾಗಿದ್ದರೂ ಯೆಶಾಯ ಮತ್ತು ದಾನಿಯೇಲನ ಪ್ರವಾದಿಕ ಪುಸ್ತಕದಲ್ಲಿ ನಾವು ನೋಡಿದಂತೆ ನೇರವಾದ ಹೇಳಿಕೆಯು ಸತ್ತವರ ದೇಹದ ಪುನರುತ್ಥಾನವನ್ನು ಒಪ್ಪಿಕೊಳ್ಳುತ್ತದೆ. ಬೆಳೆಯುತ್ತಿದ್ದ ಈ ತಿಳುವಳಿಕೆಯು ಯೆಶಾಯನ ಇಲ್ಲವೇ ದಾನಿಯೇಲನ ಪರವಾಗಿದ್ದ ಶ್ರೇಷ್ಠ ಬುಧ್ಧಿ ವಂತಿಕೆಯ ಪರಿಣಾಮವಾದದ್ದಾಗಿರುವದಿಲ್ಲ. ದೇವರ ಪ್ರವಾದಿಗಳಾಗಿ ಅವರು ದೇವರ ಪ್ರವಾದನೆಯನ್ನು ಹೊಂದಿಕೊಂಡರು.

ನಮ್ಮ ಅಧ್ಯಯನಕ್ಕೆ ಯುಕ್ತವಾದ ದೇವರ ಪ್ರಗತಿಪರ ಪ್ರಕಟನೆಯು ಇನ್ನೊಂದು ರೀತಿಯಲ್ಲಿ ಸಂಭವಿಸುತ್ತದೆ. ದೇವರ ವಾಕ್ಯಗಳನ್ನು ಜನರಿಗೆ ಮೋಶೆಯು ಮಾತಾಡಿದಾಗ "ಒಬ್ಬ ಪ್ರವಾದಿಗೆ" ಸೂಚಿಸಿದ್ದನ್ನು ಗಮನಿಸಿರಿ:

> ನಿಮ್ಮ ದೇವರಾದ ಕರ್ತನು ನಿಮ್ಮ ಸಹೋದರರಲ್ಲಿ ನನ್ನಂಥ ಪ್ರವಾದಿಯನ್ನು (ನಿಮಗೆ) ಏರ್ಪಡಿಸುವನುಣಿ ಅವನಿಗೇ ನೀವು ಕಿವಿಗೊಡಬೇಕು. ... ಇವರ ಸ್ವದೇಶದವರಲ್ಲಿ ನಿನ್ನಂಥ ಪ್ರವಾದಿಯನ್ನು ಅವರಿಗೋಸ್ಕರ ಏರ್ಪಡಿಸುವೆನುಣಿ ಅವನ ಬಾಯಿಂದ ನನ್ನ ಮಾತುಗಳನ್ನು ನುಡಿಸುವೆನು, ನಾನು ಅವನಿಗೆ ಆಜ್ಞಾಪಿಸಿದ್ದನ್ನೆಲ್ಲಾ ಅವನು ಅವರಿಗೆ ತಿಳಿಸುವನು. ಅವನು ನನ್ನ ಹೆಸರಿನಲ್ಲಿ ಹೇಳಿದ ಮಾತುಗಳಿಗೆ ಯಾರು ಕಿವಿಕೊಡುವದಿಲ್ಲವೋ ಅಂಥವರನ್ನು ನಾನು ಶಿಕ್ಷಿಸುವೆನು (ಧರ್ಮೋಪದೇಶಕಾಂಡ 18:15-19).

ತನ್ನ ಹಿನ್ನೆಲೆಯಲ್ಲಿ, ಈ ವಾಕ್ಯಭಾಗವು ಬಹುಶ ದೇವರ ಸೇವಕರಿಂದ, ಪ್ರವಾದಿಗಳಿಂದ ಮಾತಾಡಲ್ಪಟ್ಟ ದೇವರ ಅಧಿಕಾರವುಳ್ಳ ಧ್ವನಿಗೆ ಸಂಬಂಧಿಸಿರಬಹುದು. ಇದು ಶತಮಾನದಲ್ಲಿ ಮೋಶೆ, ಯೆಶಾಯ, ಯಹೆಜ್ಕೇಲ, ಹಾಗೂ ಆಮೋಸರಂಥ ಜನರಿಂದ ಎಲ್ಲಾ ಕಡೆಗಳಲ್ಲಿ ಸಾರಲ್ಪಟ್ಟಿತು. ಹಾಗಿದ್ದರೂ, ದೇವರ ಪ್ರಸಾರವಾದ ಪ್ರಕಟನೆಯಿಂದ ಹೊಸ ಒಡಂಬಡಿಕೆಯಲ್ಲಿ ಈ ಪ್ರವಾದನೆಯು ಯೋಗ್ಯ ಸಮಯದಲ್ಲಿ ಇನ್ನೂ ಹೆಚ್ಚಿನ ಅರ್ಥದೊಂದಿಗೆ ಉದ್ಭವಿಸುವದನ್ನು ನಾವು ಕಂಡುಕೊಳ್ಳುತ್ತೇವೆ. "ಇಸ್ರಾಯೇಲು

ಜನರನ್ನು" ಒಳಗೊಂಡ ಜನರ ಗುಂಪಿಗೆ ಮೆಸ್ಸೀಯನಾದ ಯೇಸುವಿನ ಬಗ್ಗೆ ಮೋಶೆಯು ಮಾತಾಡಿದ್ದಾನೆ. ಆತನು ಎಬ್ಬಿಸಲ್ಪಡುವ, ಅಧಿಕಾರವುಳ್ಳ ಪ್ರವಾದಿಯಾಗಿದ್ದಾನೆಂದು ಹೇಳಿದ್ದಾನೆ ಎಂಬುದನ್ನು ಪೇತ್ರನು ವಿವರಿಸಿದನು.[5]

ಬೈಬಲಿನಲ್ಲಿ ಕಂಡುಬರುವ ಎರಡನೆಯ ಪ್ರಗತಿಪರ ಪ್ರಕಟನೆಯ ಉದಾಹರಣೆಗಳು ಬಂದದ್ದಕ್ಕೆ ನಮ್ಮ ಅಧ್ಯಯನದ ಮೇಲೆ ನೇರವಾದ ಪರಿಣಾಮ ಬೀರುತ್ತದೆ. ಮೊದಲನೆಯದು, ಯಾವಾಗಿನಿಂದ ನಮಗಾಗಿ ಸಂಪೂರ್ಣವಾದ ಯೋಜನೆಯು ದೇವರಿಗಿತ್ತೆಂದೂ ನಾವು ನೋಡುತ್ತೇವೆ. ಅದು ಭಾಗಭಾಗವಾದದ್ದಾಗಲೀ, ಚಿಕ್ಕತುಂಡುಗಳಿಂದ ಕೇಂದ್ರೀಕರಿಸಲ್ಪಟ್ಟದ್ದಾಗಲೀ, ದೇವರ ಪರವಾಗಿ ತೀರ್ಮಾನ ಮಾಡುವ ಕಾರ್ಯವಾಗಲೀ ಆಗಿರಲಿಲ್ಲ. ಎರಡನೆಯದಾಗಿ, ಆತನ ಪರವಾಗಿ ನಮಗೆ ಸ್ಪಷ್ಟಪಡಿಸಲ್ಪಟ್ಟಂತೆ ದೇವರ ಯೋಜನೆಯು ಅದರ ಪರಿಪೂರ್ಣತೆಯಲ್ಲಿ ಅದ್ಭುತಕರವಾಗಿ ಪ್ರಕಟಿಸಲ್ಪಟ್ಟಿರುವದನ್ನು ಗಮನಿಸಲು ನಾವು ಶಕ್ತರಾಗಿರುವದಕ್ಕಾಗಿ ನಾವು ಕೃತಜ್ಞರಾಗಿದ್ದೇವೆ.

ಜಗತ್ತಿನೊಳಗೆ ಮೆಸ್ಸೀಯನಾದ ಯೇಸುವಿನ ಬರೋಣದ ಬಗ್ಗೆ ಬಹಳ ಪ್ರಚಾರ ಕೊಡಲ್ಪಟ್ಟಿತು. ಅಧಿಕೃತನಾದಾತನು ಎಂಬಂತೆ ಮೋಶೆಯು ಆತನ ಬಗ್ಗೆ ಹೇಳಿದನು. ಹಳೇ ಒಡಂಬಡಿಕೆಯಲ್ಲಿ ಮೆಸ್ಸೀಯನ ಕುರಿತ ವಾಕ್ಯಗಳು ಕಂಡು ಬರುತ್ತವೆ.[6] "ಮೆಸ್ಸೀಯ" (ಹಿಬ್ರೂ: *mashiah*; ಗ್ರೀಕ್: ಕ್ರಿಸ್ಟೋಸ್) ಪದದ ಅರ್ಥ "ಅಭಿಷಿಕ್ತ."[7]

ಇಸ್ರಾಯೇಲಿನ ಅರಸನನ್ನು "ಆನಂದ ತೈಲದಿಂದ" ದೇವರು ಅಭಿಷೇಕಿಸುವದನ್ನು ಕೀರ್ತನೆಗಾರನು ಹೇಳಿದನು:

> ದೇವರೇ, ನಿನ್ನ ಸಿಂಹಾಸನವು ಯುಗಯುಗಾಂತರಗಳಲ್ಲಿಯೂ ಇರುವದುಣಿ
> ನಿನ್ನ ರಾಜದಂಡವು ನ್ಯಾಯಸ್ಥಾಪಕವಾದದ್ದೇ. ನೀನು ನೀತಿಯನ್ನು ಪ್ರೀತಿಸಿದಿ,
> ದುಷ್ಟತನವನ್ನು ದ್ವೇಷಿಸಿದಿಣಿ
> ಆದದರಿಂದ ದೇವರು, ನಿನ್ನ ದೇವರೇ, ನಿನ್ನನ್ನು ನಿನ್ನ ಜೊತೆಗಾರರಿಗಿಂತ
> ಉನ್ನತ ಸ್ಥಾನಕ್ಕೆ ಏರಿಸಿ ಆನಂದ ತೈಲದಿಂದ ಅಭಿಷೇಕಿಸಿದ್ದಾನೆ
> (ಕೀರ್ತನೆ 45:6, 7).

ಪ್ರಗತಿಪರ ಪ್ರಕಟಣೆಯ ತೋರುವಿಕೆಯಿಂದ ನಾವು ಈ ವಾಕ್ಯಭಾಗವು ತನ್ನ ಕುಮಾರನನ್ನು ಮೆಸ್ಸೀಯನಂತೆ ದೇವರು ಆಯ್ಕೆ ಮಾಡುವದನ್ನು ಸೂಚಿಸಲು ಉಪಯೋಗಿಸಲ್ಪಟ್ಟದ್ದನ್ನು ಕಂಡು ಕೊಳ್ಳುತ್ತೇವೆ (ಇಬ್ರಿಯ 1:8, 9).

ತನ್ನ ಕುಮಾರನು ನಿಶ್ಚಿತವಾಗಿ ಏನನ್ನು ಮಾಡಲಿಕ್ಕಾಗಿ ದೇವರು ಆಯ್ಕೆ ಮಾಡಿಕೊಂಡನು ಇಲ್ಲವೇ "ಅಭಿಷೇಕಿಸಿದನು"? ಈ ಪ್ರಶ್ನೆಗೆ ಉತ್ತರವು ಅತೀ ಮುಖ್ಯವಾದ ಹೇಳಿಕೆಗಳಲ್ಲಿ ಒಂದಾಗಿರುವುದು. ಯೋಹಾನ 3:16, 17ರಲ್ಲಿ ಉತ್ತರವು ಹೇಳಲ್ಪಟ್ಟದ್ದನ್ನು ನಾವು ಕಂಡುಕೊಳ್ಳುತ್ತೇವೆ:

> ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಕುಮಾರನನ್ನು ಕೊಟ್ಟನುಣಿ ಆತನನ್ನು ನಂಬುವ ಒಬ್ಬನಾದರೂ ನಾಶವಾಗದೆ ಎಲ್ಲರೂ ನಿತ್ಯ ಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು. ದೇವರು ತನ್ನ ಕುಮಾರನ ಮುಖಾಂತರ ಲೋಕಕ್ಕೆ ರಕ್ಷಣೆಯಾಗ ಬೇಕೆಂದು ಆತನನ್ನು ಕಳುಹಿಸಿಕೊಟ್ಟನೇ ಹೊರತು ತೀರ್ಪುಮಾಡುವದಕ್ಕಾಗಿ ಕಳುಹಿಸಲಿಲ್ಲ.

1 ತಿಮೊಥೆ 1:15ರಲ್ಲಿ ಪೌಲನು ಈ ಸತ್ಯವನ್ನು "ಕ್ರಿಸ್ತ ಯೇಸು ಪಾಪಿಗಳನ್ನು ರಕ್ಷಿಸುವದಕ್ಕೋಸ್ಕರ ಈ ಲೋಕಕ್ಕೆ ಬಂದನು ಎಂಬ ವಾಕ್ಯವು ನಂಬತಕ್ಕದ್ದಾಗಿಯೂ ಸರ್ವಾಂಗಿಕಾರಕ್ಕೆ ಯೋಗ್ಯವಾದದ್ದಾಗಿಯೂ ಅದೆ, ಆ ಪಾಪಿಗಳಲ್ಲಿ ನಾನೇ ಮುಖ್ಯನು"

ಎಂದು ಹೇಳಿದ್ದಾನೆ.

ವಿಮೋಚನೆಯ ಬಗೆಗಿನ ದೇವರ ಯೋಜನೆಯ ಸಂಕೀರ್ಣತೆಯ ಬಗ್ಗೆ ನೀವು ಎಂದಾದರೂ ಯೋಚಿಸಿರುವಿರೋ? ಮನುಷ್ಯನು ಪಾಪ ಮಾಡಿದಾಗ ದೇವರು ಯಾಕೆ ಸುಮ್ಮನೇ ಮನುಷ್ಯನನ್ನು ನಾಶ ಮಾಡಿಬಿಡಲಿಲ್ಲ ಇಲ್ಲವೇ ನೇರ ವಾಗಿ ಹೋಗಿ ಮಾನವನನ್ನು ರಕ್ಷಿಸಿ ಆ ಕಾರ್ಯವನ್ನು ಯಾಕೆ ಮುಗಿಸಿ ಬಿಡಲಿಲ್ಲ ಎಂದು ಆಶ್ಚರ್ಯಪಡುವಿರೋ? ಹಿಂದಿನ ಯುಗಗಳಿಂದ ಆತನ ಯೋಜನೆಯನ್ನು ಪರಿಣಾಮವಾಗಿಟ್ಟಿದ್ದಾನೆ? ಈ ಪ್ರಶ್ನೆಗಳಿಂದ ಸೂಚಿಸಲ್ಪಟ್ಟ ತೊಂದರೆಗಳು ದೇವರ ಹಾಗೂ ಮಾನವ ಕುಲದ ಸ್ವಭಾವದ ಕಾರಣದಿಂದ ಉದ್ಭವಿಸಿವೆಯೆಂದು ಸೂಚಿಸುವುದು ಅತಿಯಾಗಿ ಹಾಸ್ಯಾಸ್ಪದವಾಗಿ ತೋರುತ್ತದೆ - ಆದರೆ ಅದು ಸತ್ಯ ವಾಗಿದೆ.

ದೇವರ ಹಾಗೂ ಮಾನವನ ಮಧ್ಯದಲ್ಲಿಯ ಸಂಬಂಧಗಳಲ್ಲಿಯ ಪ್ರಮುಖ ಬೆಳವಣಿಗೆಯನ್ನು ಗಮನಿಸೋಣ. ದೇವರು ಪ್ರೀತಿಸುವಾತನೂ, ಪವಿತ್ರನೂ, ನ್ಯಾಯವಂತನೂ, ಕೃಪಾಳವೂ ಕ್ಷಮಿಸುವಾತನೂ ಆಗಿದ್ದಾನೆ. ಆತನ ಮಾನವ ಸೃಷ್ಟಿಯು ದೇವರಂತೆ ಶುದ್ಧವಾದದ್ದಾಗಿಯೂ ಪರಿಶುದ್ಧವಾಗಿಯೂ ಸೃಷ್ಟಿಸಲ್ಪಟ್ಟಿತು. ಪುರುಷನ ಮತ್ತು ಸ್ತ್ರೀಯ, ದೇವರ ಸೃಷ್ಟಿಸುವಿಕೆಯು ಪ್ರೀತಿಯ ಕಾರ್ಯವಾಗಿತ್ತು. ಪ್ರೀತಿಯು ಯಾವಾಗಲೂ ಪ್ರತಿಕ್ರಿಯೆಯನ್ನು ಹುಡುಕುತ್ತದೆ. ಕರ್ತವ್ಯದ ಪ್ರೀತಿಯಿಂದ ಅಲ್ಲ ಆದರೆ ಪರಸ್ಪರ ಪ್ರೀತಿಯಿಂದ ಆಗಿರುವಂಥದ್ದು. ದೇವರಿಗಾಗಿರುವ ಮಾನವ ಜೀವಿಗಳ ಪ್ರೀತಿಯ ಉತ್ತರವು ನಿಜವಾದದ್ದಾಗಿರಬೇಕು. ಅವರಿಗೆ ಆಯ್ಕೆ ಮಾಡುವುದು ಇರಬೇಕು. ಪ್ರೀತಿಸು ವದನ್ನು ಆಯ್ಕೆ ಮಾಡಿಕೊಳ್ಳಲು ಮತ್ತು ದೇವರ ಚಿತ್ತಕ್ಕೆ ಸಂತೋಷದಿಂದ ಒಪ್ಪಿಕೊಳ್ಳಲು ಅವರು ಶಕ್ತರಾಗಿರಬೇಕುಣಿ ಇಲ್ಲದಿದ್ದರೆ, ಅವರ ಸಂಬಂಧವು ಪ್ರೀತಿಯದ್ದಾಗಿರುವದಿಲ್ಲ. ಹಾಗೂ ಭಕ್ತಿಯುಳ್ಳದ್ದಾಗಿರುವದಿಲ್ಲ. ದೇವರನ್ನು ತೃಪ್ತಿಗೊಳಿಸುವುದರ ಬದುಲು ಅವರು ತಮ್ಮನ್ನು ತೃಪ್ತಿಪಡಿಸಿಕೊಳ್ಳಲು ತೀರ್ಮಾನಿಸಿಕೊಂಡದ್ದರಿಂದ ಅವರು ತಪ್ಪಾದ ಆಯ್ಕೆ ಮಾಡಿಕೊಂಡರು. ದೇವರ ಪರಿಶದ್ಧ ಸ್ವಭಾವದ ಹಾಗೂ ಮಾನವನ ಪಾಪಭರಿತತೆಯ ಕಾರಣದಿಂದ ದೇವರಿಗೂ ಮಾನವರಿಗೂ ಮಧ್ಯದಲ್ಲಿ ಒಡುಕು ಉಂಟಾಯಿತು.

ತನ್ನ ಪ್ರೀತಿಸುವ ಸ್ವಭಾವದಲ್ಲಿ ದೇವರು "ಬೇರೆಯಾಗಿ ಹೋದವರನ್ನು" ಪರಸ್ಪರ ಪ್ರೀತಿಯ ಅನ್ಯೋನ್ಯತೆಗೆ ಹಿಂದಿರುಗಿ ತರಲು ಸಂಪರ್ಕಿಸಿದನು. ಹಾಗಿದ್ದರೂ ಇದರಲ್ಲಿ ತೊಡಕಿನ ಸಂಗತಿಗಳಿದ್ದವು. ಅವರ ಪಾಪಭರಿತ ಸ್ಥಿತಿಯಲ್ಲಿ ದೇವರು ಅವರನ್ನು ಹಿಂದಿರುಗಿ ಸ್ವೀಕರಿಸಲಾರದವನಾಗಿದ್ದನು. ಯಾಕಂದರೆ ಆತನು ಸರ್ವ ಸಂಪೂರ್ಣ ವಾಗಿ ಶುದ್ಧನಾಗಿದ್ದನು. ಸರ್ವ ಸಂಪೂರ್ಣ ಶುದ್ಧತೆಯು ಅಶುದ್ಧತೆಯೊಂದಿಗೆ ಮಿಶ್ರವಾ ಗಲಾರದು. ದೇವರು ಸರ್ವಸಂಪೂರ್ಣವಾಗಿ ನ್ಯಾಯವಂತನಾಗಿರವದರಿಂದ ಆತನು ಸುಮ್ಮನೇ ಅವರ ಪಾಪಗಳನ್ನು ಕ್ಷಮಿಸಲಾರನು. ಪಾಪವು ಕ್ರಯಕೊಡಬೇಕಾಗಿದೆ. ನ್ಯಾಯವು ಅದನ್ನು ಕೇಳುತ್ತದೆ.

ಸರ್ವಜ್ಞಾನಿಯಾದ ದೇವರ ಜ್ಞಾನವು ಈ ಜಯಿಸಲಾಗದ ಬಿಕ್ಕಟ್ಟೆಂದು ತೋರು ವದಕ್ಕೆ ಆತನ ಪರಿಹಾರದಲ್ಲಿ ಕಂಡು ಬಂದಿದೆ. ಅದು ಬೈಬಲಿನಲ್ಲಿಯ ಪುಟಗಳಲ್ಲಿ ಪ್ರಕಟಿಸಲ್ಪಟ್ಟಿದೆ ಹಾಗೂ ಸಾವಿರಾರು ವರ್ಷಗಳಲ್ಲಿ ಪ್ರಸರಿಸಲ್ಪಟ್ಟಿದೆ. ನಾವು ಅಧ್ಯಯನ ಮಾಡಿದಂತೆ ಎಲ್ಲಾ ಜನಾಂಗಗಳವರು ಆಶೀರ್ವದಿಸಲ್ಪಡುವಂತೆ ವಿಶೇಷ ಜನಾಂಗವನ್ನು ಆತನು ಕರೆಯುವದರಲ್ಲಿ ನೋಡಿದ್ದೇವೆ. ಈ ಜನರು ವಿಗ್ರಹಾರಧನೆಗೆ ತಿರುಗಿಕೊಂಡಿದ್ದನ್ನು, ಆತನ ಪ್ರೀತಿಯನ್ನು ಪರೀಕ್ಷಿಸಿದ್ದನ್ನು, ಆತನ ಆಜ್ಞೆಯನ್ನು ಮೀರಿದ್ದನ್ನು ನಾವು ಗಮನಿಸು ವಾಗ ಆಶ್ಚರ್ಯಪಟ್ಟಿದ್ದೇವೆ. ಆತನ ಅಪಾರವಾದ ತಾಳ್ಮೆ ಹಾಗೂ ದೀರ್ಘಶಾಂತಿಯ ಬಗ್ಗೆ

ನಾವು ಆಶ್ಚರ್ಯಪಡುತ್ತೇವೆ. ಆತನು ತನ್ನ ಪ್ರವಾದಿಗಳ ಮುಖಾಂತರ ಅವರನ್ನು ಹಿಂದಿರುಗಿ ಕರೆಯುತ್ತಲೇ ಇದ್ದನು. ಅವರ ಮೂಲಕವಾಗಿ ಎಲ್ಲಾ ಜನಾಂಗಗಳಿಗೆ ಆಶೀರ್ವಾದವನ್ನು ತರುವ ಮೆಸ್ಸೀಯನ ಆಗಮನದ ಬಗ್ಗೆ ಜನರಿಗೆ ಜ್ಞಾಪಿಸುತ್ತಲೇ ಬಂದನು.

ಅಂತಿಮ ಪರಿಹಾರಕ್ಕಾಗಿ ದೇವರು ಮಾರ್ಗವನ್ನು ಸಿದ್ಧಪಡಿಸುತ್ತಿದ್ದನು. ಅದು ಸುಲಭವಾದ ಪರಿಹಾರವಾಗಿರಲಿಲ್ಲ, ಆದರೆ ಅದು ಪರಿಪೂರ್ಣವಾಗಿ ಶುದ್ಧವಾದ, ನ್ಯಾಯವಂತನಾದ ಹಾಗೂ ಪ್ರೀತಿಸುವ ದೇವರ ಯಾವುದೇ ಗುಣಲಕ್ಷಣವನ್ನು ಉಲ್ಲಂಘಿಸಿದ *ಒಂದೇ* ಒಂದು ಪರಿಹಾರವಾಗಿತ್ತು. ಆತನ ಪರಿಹಾರವು ಶುದ್ಧವಾದ ಸ್ಥಿತಿಯಲ್ಲಿ ಮಾನವರು ಆತನೊಂದಿಗೆ ಸಂಧಾನವಾಗಲಿಕ್ಕೆ ಒಪ್ಪಿಗೆ ಕೊಡುವ *ಒಂದೇ* ಒಂದು ಪರಿಹಾರವಾಗಿತ್ತು.

ಆಯ್ಕೆ ಮಾಡುವ *ತಂದೆಯಾಗಿ ದೇವರು* ತಾನಾಯ್ದುಕೊಂಡ ಜನಾಂಗಕ್ಕೆ ಅನೇಕ ಅಮೂಲ್ಯವಾದ ವಾಗ್ದಾನಗಳನ್ನು ಕೊಟ್ಟನೆಂದು ನಾವು ಗಮನಿಸಿದ್ದೇವೆ ಅಬ್ರಹಾಮನ ವಂಶದ ಮೂಲಕವಾಗಿ ಅಂತ್ಯದಲ್ಲಿ ಮೆಸ್ಸೀಯನು ಬರುವನು, ಆತನ ಮೂಲಕವಾಗಿ ಎಲ್ಲಾ ಜನಾಂಗಗಳು ಆಶೀರ್ವದಿಸಲ್ಪಡುವವು ಎಂದು ಪ್ರವಾದಿಕವಾಗಿ ಆತನು ಮಾತಾಡಿದನು. ಆದುದರಿಂದ, ಮಾನವ ಕುಲವನ್ನು ತನ್ನೊಂದಿಗೆ ಸಂಧಾನ ಪಡಿಸಿಕೊಳ್ಳಲಿಕ್ಕೆ ತನ್ನ ಪ್ರಯತ್ನದಲ್ಲಿ ದೇವರು ತನಗಾಗಿ ಇನ್ನೊಂದು ಪಾತ್ರವನ್ನು ಯೋಜಿಸಿದ್ದು ಸ್ಪಷ್ಟವಾಗಿದೆ. ಸೃಷ್ಟಿಯಲ್ಲಿ ಸಾರ್ವತ್ರಿಕ ತಂದೆಯಂತೆ ದೇವರ ಪಾತ್ರವು ರಕ್ಷಣೆಗಾಗಿ ಸಾಕಷ್ಟಾದದ್ದು ಆಗಿರಲಿಲ್ಲ. ಯಾಕಂದರೆ ಎಲ್ಲಾ ಮಾನವ ಕುಲಕ್ಕೆ ರಕ್ಷಣೆಯ ಆತನ ಆಶೀರ್ವಾದಗಳು ಲಭ್ಯವಿರುವ ಸಮಯಕ್ಕಾಗಿ ಮಾರ್ಗಸಿದ್ಧ ಮಾಡಲು ಆತನು ಜನಾಂಗದ ಆಯ್ಕೆಯ ತಂದೆಯಾದನು. ಆದುದರಿಂದ ಸಾರ್ವತ್ರಿಕ ತಂದೆಯಂತೆ ಆತನ ಕಾರ್ಯಗಳು ಇಲ್ಲವೇ ಆಯ್ಕೆ ಮಾಡುವ ತಂದೆಯಂತೆ ಆತನ ಕಾರ್ಯಗಳು ಅಂತಿಮ ಪರಿಹಾರವಾಗಿ ಆತನಿಂತ ಉದ್ದೇಶಿಸಿದವುಗಳು ಆಗಿರಲಿಲ್ಲ.

## ವಿಮೋಚನೆಯ ಯೋಜನೆ

ದೇವರ ಅಂತಿಮ ಪರಿಹಾರವು ಆತನು ಆತ್ಮಿಕ ತಂದೆಯಂತೆ ತನ್ನ ಕುಮಾರನನ್ನು ಎಲ್ಲಾ ಮಾನವತೆಯ ಪಾಪಗಳಿಗಾಗಿ ಶುದ್ಧವಾದ, ಅಮೂಲ್ಯವಾದ, ಪರಿಪೂರ್ಣವಾದ ಯಜ್ಞವಾಗಿ ಶಿಲುಬೆಯ ಮೇಲೆ ಅರ್ಪಿಸಿದಾಗ ಐತಿಹಾಸಿಕ ವಾಸ್ತವಿಕತೆಯಾಯಿತು. ಈ ಯಜ್ಞವು ಚರ್ಚಿಸಲು ಕಠಿಣವಾದದ್ದಾಗಿದೆ. ನಾವು ಹೇಳಬಹುದಾದ ಲಕ್ಷಣಗಳು ಅವರಲ್ಲಿವೆ. ಆದರೆ ಅವುಗಳನ್ನು ಗ್ರಹಿಸಲಾರೆವು. ನಾವು ಗ್ರಹಿಸದ ದೃಷ್ಟಿಕೋನಗಳೊಂದಿಗೆ ಅದು ಪ್ರೀತಿಯನ್ನು ತೋರಿಸುತ್ತದೆ. ಪಾಪವನ್ನು ವ್ಯಕ್ತಿತ್ವದ ಕುಂದು ಎಂಬ ಮಾನವ ದೃಷ್ಟಿ ಕೋನಕ್ಕೆ ವ್ಯತಿರಿಕ್ತವಾಗಿ ಅದನ್ನು ದೇವರು ನೋಡುವಂತೆ ಪಾಪದ ಬಲ ಹಾಗೂ ಭಯಂಕರತೆಯನ್ನು ಉದಾಹರಿಸುತ್ತದೆ. ತನ್ನ ವಾಗ್ದಾನಗಳಿಗೆ ನಂಬಿಗಸ್ತನಾಗಿರಲು ದೇವರ ನಿರ್ಧಾರದ ಕಠಿಣವಾದ ವಾಸ್ತವಿಕತೆಯೊಂದಿಗೆ ನಮ್ಮ ಮೇಲೆ ಪ್ರಭಾವ ಬೀರುತ್ತದೆ. ಹೇಗೋ ನಮ್ಮ ಪಾಪದಿಂದ ಹೊರಬರುವ ಮಾರ್ಗಕ್ಕಾಗಿ ಕಾರ್ಯಸಾಧಿಸುವ ನಮ್ಮ ಸ್ವಾರ್ಥದ ಮನೋಭಾವನೆಯನ್ನು ಅದು ಒಡೆದು ಹಾಕುತ್ತದೆ, ಆತನು ಶುದ್ಧನೂ ನ್ಯಾಯವಂತನೂ ಆಗಿ ಉಳಿಯುವಂತೆ ಮತ್ತು ಆ ಕುಮಾರನನ್ನು ಸ್ವೀಕರಿಸಿ ಆತನಿಗೆ ತಮ್ಮನ್ನು ಒಪ್ಪಿಸಿ ಕೊಡುವವರ ಪಾಪಗಳನ್ನು ಕ್ಷಮಿಸುವಂತೆ ತನ್ನ ಕುಮಾರನನ್ನು ಯಜ್ಞವಾಗಿ ಅರ್ಪಿಸುವ ತಂದೆಯ ಪ್ರಾಮಾಣಿಕತೆಯ ಬಗ್ಗೆ ಆಶ್ಚರ್ಯ ಚಕಿತರಾಗಿ ನಿಲ್ಲುವಂತೆ ನಮ್ಮನ್ನು ಮಾಡುತ್ತದೆ.

ತನ್ನ ಕುಮಾರನೊಂದಿಗಿನ ಆತ್ಮಿಕ ತಂದೆಯ ನಿಕಟ ಸಾಮೀಪ್ಯತೆಯ ಪರಿಶುದ್ಧ

ಬರಹಗಳಲ್ಲಿ ಬಹಳ ವಿವರವಾಗಿ ಹೇಳಲ್ಪಟ್ಟಿದೆ. "ಕಾಲವು ಪರಿಪೂರ್ಣವಾದಾಗ ದೇವರು ತನ್ನ ಮಗನನ್ನು ಕಳುಹಿಸಿಕೊಟ್ಟನು. ಧರ್ಮಶಾಸ್ತ್ರಕ್ಕೆ ಅಧೀನರಾದವರನ್ನು ವಿಮೋಚಿಸಬೇಕೆಂತಲೂ ಪುತ್ರರ ಪದವಿಯನ್ನು ನಮಗೆ ದೊರಕಿಸಬೇಕೆಂತಲೂ ಆತನು ಸ್ತ್ರೀಯಲ್ಲಿ ಹುಟ್ಟಿದವನಾಗಿಯೂ ಧರ್ಮಶಾಸ್ತ್ರಕ್ಕೆ ಅಧೀನನಾಗಿಯೂ ಬಂದನು" (ಗಲಾತ್ಯ 4:4, 5) ಎಂದು ಓದುತ್ತೇವೆ, ಮರಿಯಳಿಗೆ ಅಗ್ರಾಹ್ಯವಾದ ಯೇಸುವಿನ ಕನ್ಯಾ ಜನನವು ದೇವರ ಕುಮಾರನು "ಸ್ತ್ರೀಯಿಂದ ಜನಿಸಿದ್ದ" ಮಾರ್ಗವಾಗಿತ್ತು. "ನಿನ್ನ ಮೇಲೆ ಪವಿತ್ರಾತ್ಮ ಬರುವುದುಣಿ ಮಹೋನ್ನತನ ಶಕ್ತಿಯ ನೆರಳು ನಿನ್ನ ಮೇಲೆ ಬೀಳುವುದುಣಿ ಆದದರಿಂದ ಹುಟ್ಟುವ ಆ ಪರಿಶುದ್ಧ ಶಿಶು ದೇವರ ಕುಮಾರನು ಎಂದು ಅನ್ನಿಸಿಕೊಳ್ಳುವನು" (ಲೂಕ 1:35) ಎಂದು ದೇವದೂತನು ಮರಿಯಳಿಗೆ ಹೇಳಿದನು.[8]

ಮೋಶೆಯ ಧರ್ಮಶಾಸ್ತ್ರವು ಪರಿಣಾಮ ಕಾರಿಯಾಗಿದ್ದ ಸಮಯದಲ್ಲಿ ಯೇಸುವು ಜನಿಸಿದ್ದು ಮಾತ್ರವಲ್ಲದೇ ಆತನು ತನ್ನ ಜೀವಿತವನ್ನು ಧರ್ಮಶಾಸ್ತ್ರದ ಅಧೀನತೆಯಲ್ಲಿ ಜೀವಿಸಿದನು. ಹಾಗಿದ್ದರೂ ತನ್ನ ಯಜ್ಞದ ಮರಣದಲ್ಲಿ, "ನಮ್ಮ ಅಪರಾಧಗಳನ್ನೆಲ್ಲಾ ಕ್ಷಮಿಸಿ ನಮ್ಮ ಮೇಲೆ ದೋಷಾರೋಪಣೆ ಮಾಡಿದಂಥ ಆಜ್ಞಾರೂಪವಾಗಿದ್ದಂಥ ಪತ್ರವನ್ನು ಕೆಡಿಸಿ ಅದನ್ನು ಶಿಲುಬೆಗೆ ಜಡಿದು ಇಲ್ಲದಂತಾಗ ಮಾಡಿದನು" (ಕೊಲೊಸ್ಸೆ 2:14ಣಿ ನೋಡಿರಿ ಇಬ್ರಿಯ 10:5-10).

ಕ್ರಿಸ್ತನ ಯಜ್ಞವು ಹಳೇ ನಿಯಮದ ನೆರವೇರಿಕೆ ಮಾತ್ರವೇ ಆಗಿರದೇ ಅದರ ಅಧೀನತೆಯಲ್ಲಿ ನಂಬಿಕಸ್ತಿಕೆಯಿಂದ ಜೀವಿಸಿದವರಿಗಾಗಿ ವಿಮೋಚನೆಯ ಸಾಧನವೂ ಆಗಿತ್ತು. ನಾವು ಹೀಗೆ ಓದುತ್ತೇವೆ,

> ಮತ್ತು ಈ ಕಾರಣದಿಂದ ಆತನು ಒಂದು ಹೊಸ ಒಡಂಬಡಿಕೆಗೆ ಮಧ್ಯಸ್ಥನಾಗಿದ್ದಾನೆ ಮೊದಲನೆಯ ಒಡಂಬಡಿಕೆಯ ಕಾಲದಲ್ಲಿ ನಡೆದ ಅಕ್ರಮಗಳ ಪರಿಹಾರಕ್ಕಾಗಿ ಆತನು ಮರಣವನ್ನೂ ಅನುಭವಿಸಿದ್ದರಿಂದ ದೇವರಿಂದ ಕರೆಯಿಸಿಕೊಂಡವರು ವಾಗ್ದಾನವಾಗಿದ್ದ ನಿತ್ಯ ಬಾಧ್ಯತೆಯನ್ನು ಹೊಂದುವದಕ್ಕೆ ಆತನ ಮೂಲಕ ಮಾರ್ಗವಾಯಿತು (ಇಬ್ರಿಯ 9:15).

"ನಾವು ಮಕ್ಕಳ ಪೂರ್ಣ ಹಕ್ಕುಗಳನ್ನು ಪಡೆಯುವಂತೆ" ಈ ಅರ್ಪಣೆಯು ಮಾಡಲ್ಪಟ್ಟಿತು (ಇಬ್ರಿಯ 12:7-11).

ಯೇಸುವಿನ ಭೂಲೋಕದ ಜೀವಿತವನ್ನು ನಾವು ಅಧ್ಯಯನ ಮಾಡುವಂತೆ ಆತನಿಗೆ ಆತನ ಪರಲೋಕದ ತಂದೆಯೊಂದಿಗೆ ಇದ್ದ ನಿಕಟ ಸಂಬಂಧದ ಬಗ್ಗೆ ನಾವು ಪ್ರಭಾವಿತರಾಗುತ್ತೇವೆ. ಆತನು ಬಾಲಕನಿದ್ದಾಗಿನಿಂದಲೇ ತಾನು ತನ್ನ ತಂದೆಯ ಕಾರ್ಯದಲ್ಲಿ ನಿರತನಾಗಿರತಕ್ಕದ್ದು ಎಂಬುದನ್ನು ತಿಳಿದವನಾಗಿದ್ದನು (ಲೂಕ 2:29). ಯೇಸುವು ತನ್ನ ಬಾಪ್ತಿಸ್ಮದ ಸಮಯದಲ್ಲಿ ತನ್ನ ವೈಯಕ್ತಿಕ ಸೇವಾ ಕಾರ್ಯದ ಪ್ರಾರಂಭದಲ್ಲಿ ಆತನ ತಂದೆಯು ಬಹಳವಾಗಿ ಗಮನ ಹರಿಸಿದನು. ಆತನು ತನ್ನ ಮಗನಿಗಾಗಿದ್ದ ಪ್ರೀತಿಯನ್ನೂ ಆತನಲ್ಲಿ ತನ್ನ ಮೆಚ್ಚಿಕೆಯನ್ನೂ ಘೋಷಿಸಿದನು (ಮತ್ತಾಯ 3:17). ಯೇಸುವಿನ ರೂಪಾಂತರದ ಸಮಯದಲ್ಲಿ ಆತನ ತಂದೆಯ ವಾಣಿಯು ತನ್ನ ಕುಮಾರನಿಗಾಗಿದ್ದ ಪ್ರೀತಿಯನ್ನೂ, ಮೆಚ್ಚಿಕೆಯನ್ನೂ ಪ್ರಕಟಿಸಿತು. ಹಾಗೂ, "ಆತನ ಮಾತನ್ನು ಕೇಳಿರಿ" ಎಂಬುದನ್ನು ಒತ್ತಿ ಹೇಳಿತು (ಮತ್ತಾಯ 17:5).

ಯೇಸುವಿಗೆ ತನ್ನ ತಂದೆಯೊಂದಿಗಿದ್ದ ನಿಕಟ ಸಂಬಂಧವನ್ನು ಆತನ ಪ್ರಾರ್ಥನೆಗಳು ಪ್ರಕಟಿಸುತ್ತವೆ. ದಾಖಲೆ ಮಾಡಲ್ಪಟ್ಟ ಆತನ ಅತಿ ದೀರ್ಘವಾದ ಪ್ರಾರ್ಥನೆಯಲ್ಲಿ ಸೃಷ್ಟಿಗಿಂತ ಮೊದಲು ಆತನಿಗೆ ತಂದೆಯೊಂದಿಗಿದ್ದ ಮಹಿಮೆಯ ಸನ್ನಿಧಿಯೂ ಆತನು ಭೂಲೋಕ

ದಲ್ಲಿ ತಂದೆಯನ್ನು ಹೇಗೆ ಮಹಿಮೆಪಡಿಸಿದನೆಂಬುದೂ ತೋರಿಸಲ್ಪಟ್ಟಿದೆ. ತನಗಾಗಿ ತನ್ನ ತಂದೆಯ ನಿತ್ಯ ಪ್ರೀತಿಯನ್ನೂ ಹಾಗೂ ಆ ಪ್ರೀತಿಯು ತನ್ನ ಅನುಯಾಯಿಗಳಲ್ಲಿಯೂ ಇರಬೇಕೆಂಬ ಅಪೇಕ್ಷೆಯನ್ನೂ ಕುರಿತು ಆತನು ಮಾತನಾಡಿದನು (ಯೋಹಾನ 17ಣಿ ಗಮನಿಸಿರಿ ವಚನಗಳು 5, 24, 26). ತನ್ನ ಅತೀ ಆಳವಾದ ಅನುಭವಗಳಲ್ಲಿಯೂ ತನ್ನ ತಂದೆಯ ಚಿತ್ತವು ನೆರವೇರಬೇಕೆಂದು ಯೇಸುವು ಪ್ರಾರ್ಥಿಸಿದನು. ಆತನು ಶಿಲುಬೆಯ ಮೇಲೆ ತನ್ನ ಮರಣವನ್ನು ಸಮೀಪಿಸಿದಾಗ, "ನನ್ನ ತಂದೆಯೇ, ಸಾಧ್ಯವಾಗಿದ್ದರೆ ಈ ಪಾತ್ರೆಯು ನನ್ನನ್ನು ಬಿಟ್ಟು ಹೋಗಲಿಣಿ ಹೇಗೂ ನನ್ನ ಚಿತ್ತದಂತಾಗದೆ ನಿನ್ನ ಚಿತ್ತದಂತೆಯೇ ಆಗಲಿ" (ಮತ್ತಾಯ 26:39) ಎಂದು ಪ್ರಾರ್ಥಿಸಿದನು. ಆತನು ಶಿಲುಬೆಯ ಮೇಲೆ ನೇತಾಡುತ್ತಿದ್ದಾಗ, "ತಂದೆಯೇ, ಅವರನ್ನು ಕ್ಷಮಿಸುಣಿ ಅವರು ಏನು ಮಾಡುತ್ತಿದ್ದಾರೆಂಬುದನ್ನು ಅರಿಯರು" ಎಂದು ಹೇಳಿದನು. ಆಮೇಲೆ ಆತನು ಪ್ರಾಣಬಿಡುವಾಗ, ತನ್ನ ಅಂತಿಮ ಮಾತುಗಳಾಗಿ, "ತಂದೆಯೇ, ನನ್ನ ಆತ್ಮವನ್ನು ನಿನ್ನ ಕೈಗಳಲ್ಲಿ ಒಪ್ಪಿಸುತ್ತೇನೆ" ಎಂದು ಹೇಳಿದನು (ಲೂಕ 23:34, 46). ದೇವರು ನಿಜವಾಗಿಯೂ ಯೇಸು ಕ್ರಿಸ್ತನ ಆತ್ಮಿಕ ತಂದೆಯಾಗಿದ್ದನು ಎಂಬುದನ್ನು ಕಲಿತು ಕೊಳ್ಳುತ್ತೇವೆ.

ಯೇಸುವು ಮೋಶೆಯ ಹಳೇ ಒಡಂಬಡಿಕೆಯನ್ನು (ನಿಯಮವನ್ನು) ನೆರವೇರಿಸಿದರೂ, ತನ್ನ ಮರಣದಿಂದ ಹೊಸ ಒಡಂಬಡಿಕೆಯನ್ನು ಸ್ಥಾಪಿಸಿದರೂ ಹಳೇ ಒಡಂಬಡಿಕೆಯ ಅಧೀನತೆಯಲ್ಲಿ ಆತನು ಜೀವಿಸಿದನು ಹಾಗೂ ಮರಣ ಹೊಂದಿದನು, "ತಪ್ಪಿಸಿಕೊಂಡ ಕುರಿಗಳಂತಿರುವ ಇಸ್ರಾಯೇಲಿನ ಮನೆತನದವರ ಬಳಿಗೆ ಕಳುಹಿಸಲ್ಪಟ್ಟ" (ಮತ್ತಾಯ 15:24), ದಾವೀದನ ಮಾನವ ಅರಸು ವಂಶಾವಳಿಯ ಯೆಹೂದ್ಯನಂತೆ (ಲೂಕ 3:23ಃ-31), ಆತನು ಮೋಶೆಯ ಧರ್ಮಶಾಸ್ತ್ರದ ಅಧೀನತೆಯಲ್ಲಿದ್ದ ತನ್ನ ಸ್ವಂತ ಜನರಿಗೆ ಬೋಧಿಸುತ್ತಿದ್ದನು ಮತ್ತು ಪ್ರಸಂಗಿಸುತ್ತಿದ್ದನು ಎಂದು ಅರ್ಥವಾಗುತ್ತದೆ. (ಅನ್ಯಜನರು ತನ್ನ ಬಳಿಗೆ ಬಂದಾಗ ಕೆಲವು ಸಲ ಯೇಸುವು ಉತ್ತರಕೊಟ್ಟನು [ಉದಾಹರಣೆ ಮತ್ತಾಯ 15:21-28].) ಆದುದರಿಂದ ತಂದೆಯ ಬಗೆಗಿನ ಆತನ ಹೆಚ್ಚಾದ ಬೋಧನೆಯು ದೇವರನ್ನು ಆಯ್ಕೆಮಾಡುವ ತಂದೆ ಎಂದು ತಿಳಿದಿದ್ದ ಜನರಿಗಾಗಿ ಇತ್ತು. ದೇವರ ಬಗ್ಗೆ "ನಿಮ್ಮ ತಂದೆ" ಎಂಬಂತೆ ಆತನು ಮಾತಾಡಿದನು (ಮತ್ತಾಯ 5:16, 45, 48ಣಿ 10:29).

ನಾವು ನೋಡಿದಂತೆ, ಪಾಪಭರಿತ ಮಾನವತೆಯೊಂದಿಗೆ ತನ್ನ ವ್ಯವಹಾರದಲ್ಲಿ ದೇವರು ಎಷ್ಟೋ ಹೆಚ್ಚಾಗಿ ಒಳಗೊಂಡಿರುವ ಯುಗವನ್ನು ತೆರೆಯಲ್ಲಿಕ್ಕೆದ್ದನು. ಆತನ ಕುಮಾರನಾದ ಯೇಸು ಕ್ರಿಸ್ತನ ಮುಖಾಂತರ ದೇವರನ್ನು ಆತ್ಮಿಕ ತಂದೆಯಂತೆ ತಿಳಿದು ಕೊಳ್ಳಲಿಕ್ಕೆ *ಪ್ರತಿಯೊಬ್ಬನಿಗೆ ಅವಕಾಶ* ಕೊಡುವದಕ್ಕಾಗಿ ಕಾಲವು "ಪರಿಪೂರ್ಣವಾಗಿತ್ತು." ಆದುದರಿಂದ, ತಂದೆಯ ಚಿತ್ತದ ಬಗ್ಗೆ ಹಾಗೂ ಆ ಚಿತ್ತವನ್ನು ಕೈಕೊಳ್ಳುವದರ ಮಹತ್ವದ ಬಗ್ಗೆ ತನ್ನ ಶಿಷ್ಯರೊಂದಿಗೆ ಯೇಸುವು ಮಾತನಾಡಲು ಪ್ರಾರಂಭಿಸಿದ್ದರಲ್ಲಿ ಆಶ್ಚರ್ಯವಿರುವದಿಲ್ಲ (ಮತ್ತಾಯ 7:21). ತಂದೆಯಂತೆ ದೇವರೊಂದಿಗೆ ಹಾಗೂ ಸಹೋದರನಂತೆ ಕ್ರಿಸ್ತನೊಂದಿಗೆ ಕುಟುಂಬ ಸಂಬಂಧಕ್ಕೆ ಮೂಲದಂತೆ ತಂದೆಗೆ ಈ ವಿಧೇಯತೆಯನ್ನು ಆತನು ಒತ್ತಿ ಹೇಳಿದನು (ಮತ್ತಾಯ 12:48-50). ಮಧ್ಯೆ ಪ್ರವೇಶಿಸುವವರಿಂದ ಕುಟುಂಬವು ಒಡೆಯಲ್ಪಡುವದನ್ನು ತಂದೆಯು ಬಿಟ್ಟುಕೊಡುವದಿಲ್ಲ (ಮತ್ತಾಯ 15:13).

ಯೇಸುವು ದೇವರನ್ನು ತನ್ನ ತಂದೆಯಂತೆ ಬಹಳ ಸಲ ಮಾತಾಡಿದನು. "*ನನ್ನ ತಂದೆ*" ಎಂಬ ನಿರ್ದಿಷ್ಟವಾದ ಸರ್ವನಾಮವನ್ನು ಉಪಯೋಗಿಸಿ ಆತನು ತನ್ನ ಅನುಯಾಯಿಗಳಿಗೆ ಒತ್ತಿ ಹೇಳಿದನು (ಮತ್ತಾಯ 18:35ಣಿ 20:23). "ಹಾಗಾದರೆ

ಯಾವನು ಮನುಷ್ಯರ ಮುಂದೆ ತಾನು ಯೇಸುವಿನವನೆಂದು ಒಪ್ಪಿಕೊಳ್ಳುವನೋ, ನಾನು ಸಹ ಅವನನ್ನು ನನ್ನವನೆಂದು ಪರಲೋಕದಲ್ಲಿರುವ ನನ್ನ ತಂದೆಯ ಮುಂದೆ ಒಪ್ಪಿಕೊಳ್ಳುವೆನು" (ಮತ್ತಾಯ 10:32, 33) ಎಂದೂ ಆತನು ಅವರಿಗೆ ಬೋಧಿಸಿದನು. ಹೀಗಿರುವ ಬೋಧನೆಗಳು - ಅನೇಕವುಗಳು ಇದ್ದವು - ಆತನ ಶಿಷ್ಯರನ್ನು ಮತ್ತು ವಿಶೇಷ ವಾಗಿ ಆತನ ಅಪೊಸ್ತಲರನ್ನು ಜಾಗರೂಕತೆಗೊಳಿಸಿರಬಹುದು. ಆತನು ದೇವರಿಗೆ ತನ್ನ ತಂದೆಯಂತೆ ಹೇಳಿದ ರೀತಿಯಲ್ಲಿ ಅದ್ವಿತಿಯತೆ ಇತ್ತು.

ಮೊದಲು, ಯೇಸುವಿನ ತಾಯಿಯಾದ ಮರಿಯಳು "ರಹಸ್ಯವನ್ನು" ತಿಳಿದಿದ್ದಳು. ಆತನ ದೈವಿಕ ಮೂಲದ ಬಗ್ಗೆ ಆಕೆ ಅರುಹುವುಳ್ಳವಳಾಗಿದ್ದಳು. ಆತನ ಅದ್ಭುತಕರವಾದ ಜನನದ *ಘಟನಾತ್ಮಕ* ಸ್ವಭಾವವನ್ನು ನಿಶ್ಚಯವಾಗಿ ತಿಳಿದಿದ್ದಳು. ಆಕೆಯ ಗಂಡ ಯೋಸೇಫನು ನೀತಿವಂತ ಮನುಷ್ಯನಾಗಿದ್ದನು. ಮರಿಯಳು ಗರ್ಭಧರಿಸಿದ್ದರ ಬಗ್ಗೆ ಬಹಳ ವಿಚಾರ ಶೀಲನಾಗಿದ್ದನು. ಯೇಸು ಎಳೇ ಪ್ರಾಯದವನಾಗಿದ್ದಾಗ ಯೋಸೇಫನಿಗೆ ಸಂಬಂಧಿಸದೇ ತನ್ನ ತಂದೆಯ ಬಗ್ಗೆ ಮಾತಾಡಿದ್ದನ್ನು ಆಕೆ ಕೇಳಿಸಿಕೊಂಡಿದ್ದಳು. "ಆತನ ತಾಯಿ ಈ ಸಂಗತಿಗಳನ್ನೆಲ್ಲಾ ತನ್ನ ಮನಸ್ಸಿನಲ್ಲಿ ಇಟ್ಟುಕೊಂಡಳು" (ಮತ್ತಾಯ 1:18-25ಣ ಲೂಕ 1:26-38ಣ 2:41-52).

ಬಹುಶ ಯೇಸುವಿನ ಅನುಯಾಯಿಗಳು ಆತನಿಗೂ ಆತನ ತಂದೆಗೂ ಮಧ್ಯದಲ್ಲಿ ಅದ್ವಿತೀಯ ಸಂಬಂಧದ ಬಗ್ಗೆ ತಿಳಿದಿದ್ದಿರ ಬಹುದು. ಹಾಗಿದ್ದರೂ ಅರುಹು ಉಂಟಾದದ್ದು ನಿಧಾನವಾಗಿ ಬಂದಿತು. ಎಲ್ಲಕ್ಕಿಂತ ಹೆಚ್ಚಾಗಿ ದೇವರು ಅವರಿಗೂ ಸಹ ತಂದೆಯಾಗಿರಲಿಲ್ಲವೇ? ದೇವರು ಇಸ್ರಾಯೇಲನ್ನು ತನ್ನ ಮಗ ಎಂದು ಕರೆಯಲಿಲ್ಲವೋ? (ಯೆರೆಮೀಯ 31:9). ಯೇಸುವು ಕಲಿಸಿದಂತೆ ದೇವರನ್ನು "ನಮ್ಮ ತಂದೆಯೇ" ಎಂದು ಸಂಬೋಧಿಸುವುದಿಲ್ಲವೋ? (ಮತ್ತಾಯ 6:9 ಇತ್ಯಾದಿ). ಹೌದು, ಅವರು ಹಾಗೆ ಮಾಡಬಹುದು ಮತ್ತು ಹಾಗೆ ಮಾಡಿದರು.

ತಮ್ಮ ತಂದೆಯಂತೆ ಇಸ್ರಾಯೇಲ್ಯರ ದೃಷ್ಟಿಕೋನವನ್ನು ಕುರಿತು ನಾವು ಹಳೇ ಒಡಂಬಡಿಕೆಯ ಅಧ್ಯಯನ ಮಾಡಿದ್ದೇವೆ. ಯೇಸುವಿನ ದಿನದ ಯೆಹೂದಿ ಧರ್ಮವು ದೇವರನ್ನು ತಂದೆಯಂತೆ ನಿಕಟವಾದ ತತ್ವವನ್ನು ಪ್ರತಿಬಿಂಬಿಸಿತೆಂದು ನಾವು ತಿಳಿದಿದ್ದೇವೆ.

ಹೀಗಿದ್ದರೂ ಯೇಸುವಿನ ದೇವರೊಂದಿಗಿನ ತಂದೆ/ಕುಮಾರರ ಅದ್ವಿತೀಯ ಸಂಬಂಧವನ್ನು ಪರಿಪೂರ್ಣವಾಗಿ ಗ್ರಹಿಸುವುದು ಯೆಹೂದ್ಯರಿಗೆ ಕಠಿಣವಾಗಿತ್ತು. ಯೇಸುವು ದೇವರ ಕೂಮಾರನಂತೆ "ದೇವರ ಮಕ್ಕಳು" ಎಂದು ಕರೆಯಲ್ಪಟ್ಟ ಇತರರೊಂದಿಗೆ ಯಾವ ಭಿನ್ನತೆಯಿಂದ ಇದ್ದನೆಂದು ಅವರು ತಿಳಿಯಬೇಕು? ಅವನಿಗಿಂತ ಮೊದಲಿನ ದೊಡ್ಡ ಮಕ್ಕಳು ನಾಯಕರು ಆತನ ಮಕ್ಕಳು ಎಂದು ಕರೆಯಲ್ಪಟ್ಟಿರಲಿಲ್ಲವೇ? (2 ಸಮುವೇಲ 7:14ಣ ಕೀರ್ತನೆ 89:26, 27). ಹೌದು, "ಪೂರ್ಣ ಸತ್ಯವನ್ನು" ಕಲಿಯಲಿಕ್ಕೆ ಅವರಿಗೆ ಆತ್ಮಿಕ ತಂದೆಯಾದ ದೇವರಿಂದ ಒಂದು ಪ್ರಕಟಣೆ ಬೇಕಾಗಿತ್ತೆಂಬುದರಿಂದ ನಾವು ಆಶ್ಚರ್ಯಪಡಬಹುದು.

ದೇವರಿಂದ ಬಂದ ಸಂದೇಶವಾಹಕನಾದ ದೇವದೂತನು ಮರಿಯಳು ಒಂದು ಮಗುವಿಗೆ ಜನ್ಮ ಕೊಡುವಳು ಎಂದು ಯೋಸೇಫನಿಗೆ ಹೇಳಿದನು: "ಆಕೆಯ ಗರ್ಭವು ಪರಿಶುದ್ಧಾತ್ಮದಿಂದಲೇ ಆದದ್ದು. ಆಕೆಯು ಒಬ್ಬ ಮಗನನ್ನು ಹೆರುವಳುಣ ನೀನು ಆತನಿಗೆ ಯೇಸು ಎಂದು ಹೆಸರಿಡಬೇಕುಣ ಯಾಕಂದರೆ ಆತನೇ ತನ್ನ ಜನರನ್ನು ಅವರ ಪಾಪಗಳಿಂದ ಬಿಡಿಸಿ ಕಾಯುವನು" (ಮತ್ತಾಯ 1:20ಬಿ, 21). ಹೀಗೆ ಯೆಶಾಯನ ಪ್ರವಾದನೆಯ ಎರಡನೆಯ ಹಂತದ ನೆರವೇರುವಿಕೆಯಾಯಿತು: "ಇಗೋ, ಒಬ್ಬ ಕನ್ನಿಕೆಯು ಗರ್ಭಣಿಯಾಗಿ ಮಗನನ್ನು ಹೆರುವಳುಣ ಆತನಿಗೆ ಇಮ್ಮಾನುವೇಲ್ ಎಂದು

ಹೆಸರಿಡುವರು ಎಂಬುದು, ದೇವರು ನಮ್ಮ ಕೂಡ ಇದ್ದಾನೆ ಎಂಬುದು ಈ ಹೆಸರಿನ ಅರ್ಥ" (ಮತ್ತಾಯ 1:22, 23ಣ ಯೆಶಾಯ 7:14). ಈ ಲೋಕದೊಳಗೆ ಯೇಸು ಅದ್ಭುತಕರವಾದ ಜನನವನ್ನು ಅನುಭವಿಸಿದನು. ಹಾಗೂ ದೇವರಂತೆ ಕಾನೂನು ಬದ್ಧ ಗುರುತಿಸಿಕೊಳ್ಳುವಿಕೆಯನ್ನು ಹೊಂದಿಕೊಳ್ಳಬೇಕಾಗಿತ್ತು, ನಾವು ಹೇಳಿದಂತೆ ಅನೇಕ ಸಂಗತಿಗಳನ್ನು ಮರಿಯಳು ತನ್ನ ಹೃದಯದಲ್ಲಿ ಇಟ್ಟುಕೊಂಡಳು.

ನಾವು ಇದೆಲ್ಲವನ್ನು ಇದು ಹೇಳಲ್ಪಟ್ಟಂತೆಯೇ ಗಂಭೀರವಾಗಿ ತೆಗೆದುಕೊಂಡರೆ ಇದು ಎಷ್ಟು ಮಹತ್ತರವಾದದ್ದು ಎಂಬುದನ್ನು ಅರ್ಥಮಾಡಿಕೊಳ್ಳುತ್ತೇವೆ. ಜಗತ್ತಿನ ಇತಿಹಾಸವು ತನ್ನ ನಿರೀಕ್ಷಿತ ಹಾದಿಯನ್ನು ಬದಲಾಯಿಸುವಂಥದ್ದಾಗಿತ್ತು. ಸಮಯಗಳು ಬದಲಾಗುತ್ತಿದ್ದವು, ಹೊಸದಾದ ಹಾಗೂ ಮಹಿಮೆಯುಳ್ಳ ಯುಗವು ಪ್ರಗತಿಯಲ್ಲಿತ್ತು. ಅಷ್ಟು ಮಹಾಗಾತ್ರದ ಘಟನೆಗಳಿಗೆ ಸಂಬಂಧಿಸುವುದು ಕೇವಲ ಮಾನವರಿಗೆ ಕಷ್ಟಕರವಾದದ್ದಾಗಿತ್ತು, ಚರಿತ್ರೆಯೊಳಗೆ ಯೇಸುವಿನ ಪ್ರವೇಶಕ್ಕೆ ದೈವಿಕ ವಿವರಣೆಯ ಅಗತ್ಯತೆಯು ಅಲ್ಪ ಆಶ್ಚರ್ಯವಾದದ್ದಲ್ಲ. ಅದೂ ಸಹ ಗುರುತಿಸಲಿಕ್ಕೆ ನಿಧಾನವಾಗಿತ್ತು. ಎಲ್ಲಕ್ಕಿಂತ ಹೆಚ್ಚಾಗಿ ಇಲ್ಲಿ ಯೇಸುವು ತನ್ನ ಮಹಾ ಸೇವಾ ಕಾರ್ಯದಲ್ಲಿದ್ದಾಗ ಆತನನ್ನು ಗುರುತಿಸುವದರೊಂದಿಗೆ ಹೋರಾಡಿದ ಜನರಿಗೆ ನಮಗಿರುವಂತೆ, ಈ ಮಹತ್ವದ ಸತ್ಯಗಳನ್ನು ತಿಳಿದುಕೊಳ್ಳಲು ಮತ್ತಾಯ, ಮಾರ್ಕ, ಲೂಕ ಮತ್ತು ಯೋಹಾನರ ಸುವಾರ್ತೆಗಳಿರಲಿಲ್ಲ.

ಹೀಗಿದ್ದರೂ, ತಂದೆಯು ತನ್ನ ಕುಮಾರನ ನಿಜವಾದ *ಸ್ವಭಾವವನ್ನು* ಬಹಿರಂಗ ಪಡಿಸುವಲ್ಲಿ ಪಟ್ಟು ಹಿಡಿದಿದ್ದನೆಂದು ನಾವು ಓದುತ್ತೇವೆ. ಉದಾಹರಣೆಯಾಗಿ, ನತಾನಯೇಲನ ಮಾತುಗಳಲ್ಲಿ ಯೇಸುವನ್ನು ವಿವರಿಸುವಲ್ಲಿ ಸತ್ಯವಿದೆಣ "ಗುರುವೇ, ನೀನು ದೇವರ ಕುಮಾರನುಣ ನೀನು ಇಸ್ರಾಯೇಲಿನ ಅರಸನು" (ಯೋಹಾನ 1:49). ಯೇಸುವು ಅವನ ಯಥಾರ್ಥತೆಯನ್ನು ಮೆಚ್ಚಿಕೊಂಡನು - ಆದರೆ ಅವನ ಮಾತುಗಳು ಸಮಯಗಳ ಯೆಹೂದಿ ಮನಸ್ಸುಗಳಲ್ಲಿ ಬೇರೂರಿದ್ದ ಹಳೇ ಕಾಲದ ದೇಶಾಭಿಮಾನವನ್ನು ಪ್ರಕಟಿಸಲಿಲ್ಲವೋ? ಅಂಥ ಪ್ರಭಾವಗಳಿಂದ ನತಾನಯೇಲನು ಮುಕ್ತನಾಗಿದ್ದನೋ?

ಯೆಹೂದ್ಯರು ರಾಷ್ಟ್ರೀಯ ಪುನರುಜ್ಜೀವನಕ್ಕಾಗಿಯೂ ದಾವೀದ ಮತ್ತು ಸೊಲೊಮೋನರ ಆಳಿಕೆಯಲ್ಲಿ ತಮ್ಮ ಪಿತೃಗಳು ಅನುಭವಿಸಿದಂತೆ ದೇವರಿಂದ ಅಭಿಷೇಕಿಸಿದ, ಆಯ್ಕೆಯಾದ ಕುಮಾರನ, ನೂತನ ಅರಸನ ಮಹಿಮೆಯುಳ್ಳ ಆಳಿಕೆಗಾಗಿ ಹಂಬಲಿಸಿದರು. ಯೆಹೂದಿ ಜನಸಮೂಹಗಳು ಯೇಸುವು ಅರಸನಾಗ ಬೇಕೆಂದು ಪ್ರಯತ್ನಿಸಿದರು (ಯೋಹಾನ 6:15).

ಒಂದು ಸಂದರ್ಭದಲ್ಲಿ ಮರಣದ ಮೇಲಿನ ಯೇಸುವಿನ ಬಲವು, ಗಮನಿಸಿದವರನ್ನು ಆಶ್ಚರ್ಯಕರವಾದ ನಂಬಿಕೆಗೆ ನಡೆಸಿತು: "ಮಹಾಪ್ರವಾದಿಯು ನಮ್ಮಲ್ಲಿ ಎದ್ದಿದ್ದಾನೆ, ದೇವರು ತನ್ನ ಜನರಿಗೆ ದರ್ಶನವನ್ನು ಅನುಗ್ರಹಿಸಿದ್ದಾನೆ ಎಂದು ದೇವರನ್ನು ಕೊಂಡಾಡುವರಾದರು" (ಲೂಕ 7:16), ಅವರು ಭಯಭಕ್ತಿಯಿಂದ ತುಂಬಿದಾಗ ಮಾಡಿದ ದೊಡ್ಡ ಅರಿಕೆಯಾಗಿತ್ತು. ಆದರೆ ಅವರ ಹೊಗಳುವಿಕೆಯು ಯೇಸುವನ್ನು *ದೇವರು* ಎಂದು ಒಪ್ಪಿಕೊಂಡಿತೋ? ಇಸ್ರಾಯೇಲ್ಯರು ತಮ್ಮ ಮಧ್ಯದಲ್ಲಿ ದೇವರ ಸಂದರ್ಶನವು ಸಂಭವಿಸುವದನ್ನು ದೇವರು ತಾನೇ ನರಾವತಾರವೆತ್ತಿ ಬಂದದ್ದನ್ನು ಅನ್ವಯಿಸದೇ, ಆತನ ಮಾತುಗಳಲ್ಲಿ ಮತ್ತು ಕಾರ್ಯಗಳಲ್ಲಿ ನೋಡಿದರೆಂಬುದನ್ನು ನಾವು ಜ್ಞಾಪಿಸಿಕೊಳ್ಳಬೇಕು.[9] ಯೇಸು ತನ್ನ ದೈವತ್ವವನ್ನು ದೃಢವಾಗಿ ಹೇಳಿದಾಗ, ಅದು ಗಲಿಬಿಲಿಯನ್ನೂ ತಿರಸ್ಕಾರವನ್ನೂ ಧಾರ್ಮಿಕ ನಾಯಕರಿಂದ ಹಿಂಸೆಯನ್ನೂ ತಂದಿತ್ತು (ಯೋಹಾನ 8:42-59).

ಬೋಧಕನಾದ ನಿಕೊದೇಮನು, "ಗುರುವೇ, ನೀನು ದೇವರ ಕಡೆಯಿಂದ ಬಂದ ಬೋಧಕನೆಂದು ಬಲ್ಲೆವು. ನೀನು ಮಾಡುವಂಥ ಈ ಸೂಚಕ ಕಾರ್ಯಗಳನ್ನು ದೇವರ ಸಹಾಯವಿಲ್ಲದೆ ಮಾಡುವುದು ಯಾರಿಂದಲೂ ಆಗದು" (ಯೋಹಾನ 3:2) ಎಂದು ಹೇಳಿದಾಗ ಯೇಸುವಿನ ಬಗ್ಗೆ ಮೆಚ್ಚಿಕೆಯಿಂದ ಮಾತಾಡಿದನು. "ಒಬ್ಬ ಗುರುವು" "ಇನ್ನೊಬ್ಬ ಗುರುವಿಗೆ" ಎಂಬಂತೆ ನಿಕೊದೇಮನು ಯೇಸು ಮಾಡಿದ "ಸಂಕೇತಗ"ಳಲ್ಲಿ ದೇವರ ಬಲದ ಮತ್ತು ಆಶೀರ್ವಾದಗಳ ಪುರಾವೆಯನ್ನು ನೋಡಿದನು. ನಿಕೊದೇಮನು ಹೆಚ್ಚಿನದನ್ನು ನೋಡಿದನೋ? *ಅಗತ್ಯವಾಗಿಯೂ* ಇಲ್ಲ. ಹಾಗಿದ್ದರೂ ದೇವರು ತನ್ನ ಕುಮಾರನ *ನಿಜವಾದ ಸ್ವಭಾವವನ್ನು* ಪ್ರಕಟಿಸಲಿಕ್ಕೆ ಸಿದ್ಧತೆ ಮಾಡುತ್ತಿದ್ದನು. ದೇವರು ಪ್ರಗತಿಪರ ಪ್ರಕಟಣೆಯು ಮುಂದುವರಿಯಿತು.

ಯೇಸುವು ವಿಚಾರಿಸಿದ್ದಕ್ಕೆ ಪೇತ್ರನು ಉತ್ತರವಾಗಿ "ನೀನು ಕ್ರಿಸ್ತನು, ಜೀವಿಸುವ ದೇವರ ಕುಮಾರನು" (ಮತ್ತಾಯ 16:16) ಎಂದು ಅರಿಕೆ ಮಾಡಿದನು. ಈಗಾಗಲೇ ಹೇಳಲ್ಪಟ್ಟವುಗಳಿಗಿಂತ ಈ ಅರಿಕೆಯು ಹೆಚ್ಚು ಮಹತ್ವದ್ದಾಗಿತ್ತೋ? ಅದು ಮಹತ್ವದ್ದಾಗಿತ್ತೆಂದು ನಾವು ಬಲ್ಲೆವು. ಮೊದಲನೆಯದು, ಅದು ಯೇಸುವಿನ ವಿಚಾರಿಸುವಿಕೆಗೆ ನೇರವಾದ ಉತ್ತರವಾಗಿತ್ತು. ಎರಡನೆಯದು ಯೇಸುವಿನ ಪರಲೋಕದ ತಂದೆಯಿಂದ *ಪ್ರಕಟಿಸಲ್ಪಟ್ಟದ್ದರಿಂದ* ಆ ಅರಿಕೆಯನ್ನು ಮಾಡಲು ಪೇತ್ರನು ಶಕ್ತನಾದನು ಎಂದು ನಮಗೆ ಹೇಳಲ್ಪಟ್ಟಿದೆ (ಮತ್ತಾಯ 16:17). ಯೇಸುವಿನ ಪೂರ್ಣ ವ್ಯಕ್ತಿತ್ವವು ಈ ಅರಿಕೆಯಲ್ಲಿ ಅಡಕವಾಗಿತ್ತು.

ಅರಿಕೆಯ ಪೂರ್ಣ ಅನ್ವಯಿಸುವಿಕೆಯ ಬಗ್ಗೆ ಪೇತ್ರನಿಗೆ ಗೊತ್ತಿರಲಿಲ್ಲ ಎಂದು ತಿಳಿಯುವದಕ್ಕೆ ನಮಗೆ ಕೆಲವು ಕಾರಣಗಳಿವೆ, ಅರಿಕೆ ಮಾಡಿದ ಸ್ವಲ್ಪ ಸಮಯದಲ್ಲಿಯೇ ಯೇಸುವು ತನ್ನ ಮರಣದ ಬಗ್ಗೆ ಬೋಧಿಸಿದಾಗ ಪೇತ್ರನು ಆತನನ್ನು ಗದರಿಸುವಂಥದ್ದನ್ನೂ ಪ್ರತಿಯಾಗಿ ಆತನಿಂದ ತೀಕ್ಷ್ಣವಾಗಿ ಗದರಿಸಲ್ಪಟ್ಟದ್ದನ್ನೂ ನಾವು ಕಂಡು ಕೊಳ್ಳುತ್ತೇವೆ (ಮತ್ತಾಯ 16:21-23), ಹೇಳಿಕೆಯನ್ನು ಕೊಡುವಂಥದ್ದು, ಪ್ರೇರೇಪಣೆಯಿಂದಲೂ ಸಹ, ತಾನು ಪೂರ್ಣವಾಗಿ ತಿಳಿದುಕೊಳ್ಳದ ಮಹತ್ವವನ್ನು ಪ್ರಶ್ನಿಸಬೇಕಾಗಿರಲಿಲ್ಲ ಎಂಬುದನ್ನು ನಾವು ತಿಳಿದಿದ್ದೇವೆ (ಅಪೊಸ್ತಲರ ಕೃತ್ಯ 2:39ಣಿ 10:28-34). ಭಾವೋದ್ವೇಗದ ಸಮಯದಲ್ಲಿ ಪೇತ್ರನು ದುಡುಕಿನಿಂದ ಮಾತಾಡಬಲ್ಲನೆಂದೂ ನಾವು ತಿಳಿದಿದ್ದೇವೆ (ಮತ್ತಾಯ 17:4, 5ಣಿ ಮಾರ್ಕ 9:5, 6ಣಿ ಲೂಕ 9:33). ತನ್ನ ಒಡೆಯನಿಗಾಗಿ ಆಳವಾದ ನಿಷ್ಟೆಯ ಸಮಯದಲ್ಲಿಯೂ ಸಹ ಪೇತ್ರನು ಒತ್ತಡದಲ್ಲಿ ನಿಲ್ಲುವದರ ಹೃದಯ ಪೂರ್ಣ ನಿರ್ಧಾರವನ್ನು ಹೇಳಬಲ್ಲನು (ಮತ್ತಾಯ 26:33-35, 69-75) ಆದುದರಿಂದ, ಯೇಸುವು, ದೇವರ ಕುಮಾರನಾದ ಕ್ರಿಸ್ತನು ಎಂಬ ಅವನ ಮೆಚ್ಚಿಕೆಯ ಹಾಗೂ ನಿಜವಾದ ಅರಿಕೆಯ ಪೂರ್ಣ ಮಹತ್ವವನ್ನು ಪೇತ್ರನು ಅರ್ಥಮಾಡಿಕೊಳ್ಳಲಿಲ್ಲವೆಂದು ನಾವು ತೀರ್ಮಾನಿಸ ಬೇಕಾಗುತ್ತದೆ.

ಬಹಶ ಯೇಸುವಿನ ಮರಣ, ಹೂಣಿಡುವಿಕೆ, ಹಾಗೂ ಪುನರುತ್ಥಾನದ ನಂತರವೇ ಮಾನವ ತುಟಿಗಳು ಆತನು *ಇಮ್ಮಾನುವೇಲ* ಆಗಿದ್ದಾನೆಂದು ಘೋಷಿಸಿದವು ಎಂಬುದು ಆಶ್ಚರ್ಯಕರವಾದದ್ದಾಗಿರುವದಿಲ್ಲ. ಸಂಶಯ ಪಡುವ ವ್ಯಕ್ತಿಯಿಂದಲೇ ಹೇಳಲ್ಪಟ್ಟ ಭೂಮಿನಡುಗಿಸುವ ಈ ಸತ್ಯವು ಎಂಥದ್ದಾಗಿದೆ! ಥೋಮನು ಯೇಸುವಿನ ಬಲವನ್ನು ನೋಡಿದ್ದನು. ಸಮಾಂತರತೆಯಿಲ್ಲದ ಆತನ ಬೋಧನೆಯನ್ನು ಕೇಳಿದ್ದನು. ಆತನ ಪರಿಪೂರ್ಣ, ನೀತಿಯುಳ್ಳ ಜೀವಿತವನ್ನು ಗಮನಿಸುವ ಅವಕಾಶ ಹೊಂದಿದ್ದನು. ಕಷ್ಟದಲ್ಲಿರುವವರಿಗಾಗಿ ಆತನ ಆಳವಾದ ಸಹಾನುಭೂತಿಯನ್ನು ಅವನು ನೋಡಿದ್ದನು. "ನಾನು ಆಗಿದ್ದೇನೆ" (ಯೋಹಾನ 8:58) ಎಂದು ಯೇಸುವು ತಾನೇ ಹೇಳಿದ್ದನ್ನು ಅವನು ಕೇಳಿದ್ದಿರಬಹುದು.

ಥೋಮನು ಪುನರುತ್ಥಾನನಾದ ಯೇಸುವಿನ ಮುಂದೆ ನಿಂತುಕೊಂಡಾಗ ಥೋಮನ ಮನಸ್ಸಿನಲ್ಲಿ ಇದೆಲ್ಲವೂ ಬಹಶ ಸ್ಪಷ್ಟವಾಗಿ ಬಂದಿರಬಹುದು. ಅವನು ನೋಡಿದ್ದು ಅವನ ಯೋಚನೆಗಾಗಿ ಒಂದು ಹೇಳಿಕೆಯಾಗಲೀ, ತತ್ವವಾಗಲೀ ಇಲ್ಲವೇ ಸೂಚಿತ ಸತ್ಯವಾಗಲೀ ರೂಪಿಸಲ್ಪಡಲಿಲ್ಲ. ಯೇಸುವಿನ ದೇಹದಲ್ಲಿ ಶಿಲುಬೆಗೆ ಹಾಕಲ್ಪಟ್ಟ ಗಾಯಗಳನ್ನು ಅವನು ನೋಡಿದನು. ಅವನು ಪುನರುತ್ಥಾನದ ಕಡೆಗೆ ನೋಡುತ್ತಿದ್ದೇನೆಂದು ತಿಳಿದಿದ್ದನು - ಹಾಗೂ ದೇವರನ್ನು ಬಿಟ್ಟು ಬೇರೆ ಯಾರಿಗೂ ಮರಣದ ಮೇಲೆ ಬಲವಿಲ್ಲವೆಂಬುದನ್ನು ಅವನು ತಿಳಿದಿದ್ದನು, ಆದುದರಿಂದ, “ನನ್ನ ಕರ್ತನೆ, ನನ್ನ *ದೇವರು*” ಎಂದು ಥೋಮನು ಉತ್ತರ ಕೊಟ್ಟು ಆತನಿಗೆ ಹೇಳಿದನು (ಯೋಹಾನ 20:28).

ಕೊನೆಯದಾಗಿ *ದೇವರು*, ಆತ್ಮಿಕ ತಂದೆ, ಅದನ್ನು ಸ್ಪಷ್ಟಪಡಿಸಿದನು. ನಜರೇತಿನ ಯೇಸುವು, ಆತನ ಆತ್ಮಿಕ ಕುಮಾರನು - ದೇಹದಲ್ಲಿಯ *ದೇವತ್ವ!*

---

ಟಿಪ್ಪಣಿಗಳು

[1]ನೋಡಿರಿ ಆದಿಕಾಂಡ 12:1-3ಣ 13:14-17ಣ 14:13ಣ 15:1-6, 13-16ಣ 17:1-4. [2]John Peter Lange, “Samuel” in *Commentary on the Holy Scriptures: Critical Doctrinal and Homiletical,* trans. and ed. Philip Schaff (Grand Rapids, Mich.: Zondervan, n.d.), 475. [3]“ಅಂದರೆ, ಅತೀ ಸರಳವಾದ ರಚನೆಯಿಂದ, ಸತ್ತವರೊಳಗಿಂದ ನನಗೆ ಪುನರುತ್ಥಾನವಿರುವುದು ಹಾಗೂ ಆತನ ಮಹಿಮೆಯೊಳಗೆ ಪ್ರವೇಶವಿರುವುದು ಮತ್ತು ನನ್ನ ಮೇಲೆ ಮರಣಕ್ಕೆ ದೊರತನವಿರುವದಿಲ್ಲ” (Adam Clarke, *The Holy Bible with a Commentary and Critical Notes,* vol. 3, *Psalms* [Nashville: Abingdon, n.d], 377). [4]*She'ol* ಎಂಬುದು “ಮೃತರ ಸ್ಥಳ” ವಾಗಿರುವುದು. (Merrill F. Unger and William White, Jr., eds., *Vine's Complete Expository Dictionary of Old and New Testament Words* [Nashville: Thomas Nelson Publishers, 1985], s.v. “death.”) [5]Acts 3:17-23. Cf. Robert Jamieson, A. R. Fausset, and David Brown, *Commentary Critical and Explanatory on the Whole Bible,* vol. 2 (Grand Rapids, Mich.: Zondervan, n.d.), 176-77. [6]ಮೆಸ್ಸೀಯನ ಬಗ್ಗೆ ಉಲ್ಲೇಖಗಳನ್ನು ಕಂಡುಕೊಳ್ಳುವ ಅನೇಕ ಅಧ್ಯಾಯಗಳನ್ನು ನಾವು ನಮೂದಿಸಿರುವದಿಲ್ಲ. ಹೆಚ್ಚಿನ ಅಧ್ಯಯನಕ್ಕಾಗಿ ಇಲ್ಲಿ ಕೆಲವನ್ನು ಯಾದಿ ಮಾಡಲಾಗಿದೆ: ಕೀರ್ತನೆ 2ಣ 16ಣ 22ಣ 110ಣ ಯೆಶಾಯ 2ಣ 7ಣ 9ಣ 40ಣ 53ಣ ಯೆರೆಮೀಯ 23ಣ ಮಲಾಕಿಯ 3ಣ 4. [7]ಅಭಿಷೇಕಿಸುವ ವಿಧಾನದ ಮಹತ್ವವು ಅರಸರನ್ನು ಆಯ್ಕೆ ಮಾಡುವ ಪುರಾತನ ಪದ್ಧತಿಯನ್ನು ಓದುವಾಗ ಕಂಡುಬರುತ್ತದೆ. ಉದಾಹರಣೆಯಾಗಿ, ಸಮುವೇಲನು “ಎಣ್ಣೆ ಕುಪ್ಪಿಯಿಂದ ಅವನ ತಲೆಯ ಮೇಲೆ ತೈಲವನ್ನು ಹೊಯ್ದು ಅವನನ್ನು ಮುದ್ದಿಟ್ಟು ಅವನಿಗೆ - ಯೆಹೋವನು ತನ್ನ ಸ್ವಾಸ್ಥ್ಯದ ಮೇಲೆ ಪ್ರಭುವಾಗಿರುವದಕ್ಕೋಸ್ಕರ ನಿಜವಾಗಿ ನಿನ್ನನ್ನು ಅಭಿಷೇಕಿಸಿದ್ದಾನೆ” (1 ಸಮುವೇಲ 10:1) ಎಂದು ಹೇಳಿದಾಗ ಇಸ್ರಾಯೇಲಿನ ಮೇಲೆ ಅರಸನನ್ನಾಗಿ ದೇವರು ಸೌಲನನ್ನು ಆಯ್ದುಕೊಂಡಿದ್ದಾನೆಂಬುದನ್ನು ಸೂಚಿಸಿದನು. ಹೀಗೆ ದೇವರ “ಅಭಿಷಿಕ್ತನ” ಬಗ್ಗೆ ಓದುವಾಗ ದೇವರಿಂದ “ಆಯ್ಕೆಯಾದವನ” ಬಗ್ಗೆ ಓದುವೆವು. [8]ಪೂರ್ಣ ಹಿನ್ನೆಲೆಗಾಗಿ ಲೂಕ 1:26-37 ಓದಿರಿ. [9]1 ಅರಸು 17:22-24ಣ 2 ಅರಸು 4:32-36ಣ ಯೆರೆಮೀಯ 29:10. ಲೂಕ 7:16ನ್ನು ಕುರಿತು ನೋಡಿರಿ H. Leo Boles, *A Commentary on the Gospel of Luke* (Nashville: Gospel Advocate Publishing Co., 1940; reprint 1959), 151. “ಅವರು ಕೂಡಲೇ ಎಲೀಯ ಮತ್ತು ಎಲೀಷರನ್ನು ಪುನ ಜ್ಞಾಪಿಸಿಕೊಂಡರು ಹಾಗೂ ಇಂಥ ಮಹಾಪ್ರವಾದಿಯು “ನಮ್ಮೊಳಗೆ” ಎದ್ದಿದ್ದಾನೆ ಮತ್ತು ದೇವರು ಪ್ರವಾದಿಯೊಂದಿಗೆ ಪುನ ತನ್ನ ಜನರನ್ನು ಸಂದರ್ಶಿಸಿದ್ದಾನೆ” ಎಂದು ಬೋಲ್ಸ್ ಹೇಳಿದ್ದಾರೆ.